ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸ ಪತ್ರಿಕೆ

ಸಂಪುಟ : 5 । ಸಂಚಿಕೆ : 3 । ಮಾರ್ಚ್ - 2023 । ಪುಟಗಳು : 20 । ಬೆಲೆ : 25/-

## ಸಮಸ್ತ ಸಹಕಾರಿ ಬಂಧುಗಳಿಗೆ
## ನೂತನ ಶುಭಕೃತ್ ಸಂವತ್ಸರದ, ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು





ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು



ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು

ಆಡಳಿತ ಮಂಡಳಿ ನಿರ್ದೇಶಕರುಗಳು,
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು.



## ಬೆಳಗಾವಿಯಲ್ಲಿ ಶಿಕ್ಷಣ, ತರಬೇತಿ ಕಾರ್ಯಕ್ರಮ



**ಬೆಳಗಾವಿ :** ದಿನಾಂಕ : 17.02.2023ರಂದು ಪತ್ತಿನ ಮಹಾಮಂಡಳವು ಮಹಾಂತ ಭವನ, ಮಹಾಂತೇಶನಗರ ಇಲ್ಲಿ ಬೆಳಗಾವಿ ಜಿಲ್ಲೆಯ ವ್ಯಾಪ್ತಿಗೊಳಪಡುವ ಪತ್ತಿನ ಸಹಕಾರ ಸಂಘಗಳ ಆಡಳಿತಮಂಡಳಿ ನಿರ್ದೇಶಕರು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಒಂದು ದಿನದ ಶೈಕ್ಷಣಿಕ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಶೈಕ್ಷಣಿಕ ಕಾರ್ಯಾಗಾರದ ಉದ್ಘಾಟನೆಯನ್ನು ಪತ್ತಿನ ಮಹಾಮಂಡಳದ ನಿರ್ದೇಶಕರುಗಳಾದ ಡಾ॥ ಸಂಜಯ ಪಿ ಹೊಸಮಠ, ಶ್ರೀ ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ, ಶ್ರೀ ಉಮೇಶ್ ಶಿ ಬಾಳಿ, ಶ್ರೀ ಹೆಚ್.ಟಿ.ನಾಗೇಶ್ ರವರುಗಳು ಉದ್ಘಾಟಿಸಿದರು. ಪತ್ತಿನ ಮಹಾಮಂಡಳದ ಪ್ರಭಾರ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಆಶಾಲತಾ.ಪಿ. ರವರು ಉಪಸ್ಥಿತರಿದ್ದರು.

ಈ ಕಾರ್ಯಾಗಾರದಲ್ಲಿ ಶ್ರೀ ಪಂಪಾಪತಿ ದೇಸಾಯಿ, ಆದಾಯ ತೆರಿಗೆ ಅಧಿಕಾರಿಗಳು, ಬೆಳಗಾವಿ ಇವರಿಂದ "ಪತ್ತಿನ ಸಹಕಾರ ಸಂಘಗಳಲ್ಲಿ ಆದಾಯ ತೆರಿಗೆಯ ಪಾತ್ರ ಹಾಗೂ ಅದರ ನಿರ್ವಹಣೆ ಬಗ್ಗೆ, ಶ್ರೀಮತಿ ವಸಂತಗೀತಾ ಹಿರೇಮಠ, ಉಪನ್ಯಾಸಕರು, ಕೆ.ಐ.ಸಿ.ಎಂ. ಬೆಳಗಾವಿ "How to be a good Banker" ಕುರಿತಂತೆ, ಶ್ರೀ ಶಂಕರ ಕರಬಸನ್ನವರ, ಸಹಕಾರ ಅಭಿವೃದ್ದಿ ಅಧಿಕಾರಿಗಳು, ಬೆಳಗಾವಿ ಮತ್ತು ರಾಯಭಾಗ ತಾಲ್ಲೂಕು ಇವರಿಂದ "ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ಇತ್ತೀಚಿನ ತಿದ್ದುಪಡಿಗಳು" ಕುರಿತಂತೆ ಮತ್ತು ಡಾ. ಕನಕಪ್ಪ ಪೂಜಾರ, ಸಹಾಯಕ ಪ್ರಾಧ್ಯಾಪಕರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ "Personality Development and Communication skills" ಬಗ್ಗೆ ಶಿಬಿರಾರ್ಥಿಗಳಿಗೆ ಉಪನ್ಯಾಸ ನೀಡಿದರು. ಈ ಶಿಬಿರದಲ್ಲಿ ಸುಮಾರು 240ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿ ಅದರ ಪ್ರಯೋಜನ ಪಡೆದರು. ಜಿಲ್ಲಾ ಸಹಕಾರ ಯೂನಿಯನ್ ಅಧಿಕಾರಿಗಳಾದ ಹಾಲಪ್ಪ ಜಗ್ಗಿನವರ, ಶ್ರೀಶೈಲ ಯಡಹಳ್ಳಿ ಅವರುಗಳು ಉಪಸ್ಥಿತರಿದ್ದರು.

## ತುಮಕೂರು ಬಸವೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ರಾಜಾಜಿನಗರ ಶಾಖೆಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ



ತುಮಕೂರು ಬಸವೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ರಾಜಾಜಿನಗರ ಶಾಖೆಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ದಿನಾಂಕ:– 12.02.2023ರಂದು ಪರಮಪೂಜ್ಯ ಡಾ// ಶ್ರೀ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ಕರ್ನಾಟಕ ಸರ್ಕಾರದ ಅಬಕಾರಿ ಸಚಿವರಾದ ಶ್ರೀ ಕೆ. ಗೋಪಾಲಯ್ಯರವರು ಜ್ಯೋತಿ ಬೆಳಗಿಸುವ ಮುಖಾಂತರ ಉದ್ಘಾಟಿಸಿದರು.

ಈ ಸುಸಂದರ್ಭದಲ್ಲಿ ಬಿಬಿಎಂಪಿ ಮಾಜಿ ಉಪಮೇಯರ್ ಎಸ್.ಹರೀಶ್ ರವರು, ಸಂಗೀತ ನಿರ್ದೇಶಕರಾದ ಶ್ರೀ ಹಂಸಲೇಖರವರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ.ಬೆಂಗಳೂರು ಇದರ ಉಪಾಧ್ಯಕ್ಷರಾದ ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ ರವರು, ಸಂಘದ ಅಧ್ಯಕ್ಷರಾದ ಶ್ರೀ ಎಸ್.ಎಂ. ರಾಜುರವರು, ಉಪಾಧ್ಯಕ್ಷರಾದ ಶ್ರೀ ಟಿ.ಕೆ. ಕುಮಾರಸ್ವಾಮಿ ರವರು, ನಿರ್ದೇಶಕರಾದ ಶ್ರೀ ಟಿ.ಸಿ. ಓಹಿಲೇಶ್ವರರವರು, ಶ್ರೀ ಜಿ. ಮಲ್ಲಿಕಾರ್ಜುನಯ್ಯರವರು, ಹಾಗೂ ಇತರೆ ನಿರ್ದೇಶಕರು ಮತ್ತು ವಿವಿಧ ಗಣ್ಯರು ಉಪಸ್ಥಿತರಿದ್ದರು.

## SAHAKARA VARTHA PATRIKE
**Form IV (See rule-8)**

| | | | |
|---|---|---|---|
| 1. | Place of Publication | : | Bangalore, Karnataka |
| 2. | Periodicity of its Publications | : | Monthly |
| 3. | Printers Name | : | Biligiri Printers |
| | Whether Citizen of India | : | Yes |
| | If foreigner, State the country of origin | | |
| | Address | : | No.138, 2nd main, 8th cross, Chamaraj pet, Bangalore-560018 |
| 4. | Editors Name | : | P. Ashalatha |
| | Whether Citizen of India | : | Yes |
| | If foreigner, State the country of | : | No.16, 1st floor, 1st cross, |
| | origin Address | : | Link Road, Malleshwaram, Bangalore-560003 |
| 5. | Name and Address of Individuals who own The Newspaper and partners or share holders holding more than percent of the total capital | : | Karnataka state co operative credit societies Federation Ltd., No.16, 1st floor, 1st cross, Link Road, Malleshwaram, Bangalore-560003 |

I P. Ashalataha hereby declare that the particulars given are true to the best of my knowledge

Sd/-

Bangalore
28th, February 2023

**P. Ashalataha**
Signature of the Publisher / Editor


## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org


## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

– **ಸಂಪಾದಕರು**

**SAHAKARA VARTHA PATHRIKE KANNADA MONTHLY**
RNI-Reg No. KARKAN/2018/75796
Post Reg No. KA-BGW/1816/2022-24
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 28th of Previous Month
License to post without prepayment
PMG BG/WPP-405/2022-2024

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತ ಮಂಡಳಿ


ಸಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ


ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು


ಶ್ರೀಮತಿ ಕೆ. ಲಳಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು


ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು


ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು


ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು


ಶ್ರೀ ವಿ. ರಾಜು
ನಿರ್ದೇಶಕರು


ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು


ಶ್ರೀ ಎಂ.ಜಿ. ನರೇಂದ್ರ ಕುಮಾರ
ನಿರ್ದೇಶಕರು


ಶ್ರೀ ಡಿ. ಚನ್ನಯ್ಯ
ನಿರ್ದೇಶಕರು


ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು


ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು


ಶ್ರೀ ಧರೇಪ್ಪ ಎಂ. ಅಲಗೂರ
ನಿರ್ದೇಶಕರು


ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು


ಶ್ರೀ ಹೊನ್ನಯ್ಯ ಬಿ. ಹಿರೇಮಠ
ನಿರ್ದೇಶಕರು


ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು


ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು


ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು


ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು


ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು


ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು


ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು


ಶ್ರೀಮತಿ ಪಿ.ಆಶಾಲತಾ
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು.
ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

**Printed at : Biligiri Printers**
**Chamrajpet, Bengaluru - 18**

## ಸಂಪಾದಕೀಯ



**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**
ಅಧ್ಯಕ್ಷರು

ಕರ್ನಾಟಕ ಬಜೆಟ್‌ನಲ್ಲಿ ಬೆಳೆ ಸಾಲದ ಶೂನ್ಯ ಬಡ್ಡಿದರದ ಸಾಲದ ಮಿತಿಯನ್ನು ಗರಿಷ್ಠ 5 ಲಕ್ಷ ರೂಗಳಿಗೆ ಏರಿಕೆ ಮಾಡಿರುವುದರಿಂದ ರಾಜ್ಯದ ರೈತರಲ್ಲಿ ಹರ್ಷ ಮೂಡಿಸಿದೆ. ಇದರಿಂದ ಅಧಿಕ ಭೂಮಿ ಹೊಂದಿದ ರೈತರಿಗೂ ಈ ಯೋಜನೆ ಸಹಕಾರಿಯಾಗಲಿದ್ದು ಸರ್ಕಾರಗಳು ಸಹಕಾರ ರಂಗದ ಮೂಲಕ ಜನರಿಗೆ ಹೆಚ್ಚು ಸೌಲಭ್ಯಗಳನ್ನು ವಿಸ್ತರಿಸುವುದು ಚಳವಳಿಯ ಪರಿಣಾಮಕಾರಿ ಬೆಳವಣಿಗೆಗೆ ಕಾರಣವಾಗಲಿದೆ. ಕೇಂದ್ರ ಮತ್ತು ರಾಜ್ಯಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

# ಸಹಕಾರ ಕ್ಷೇತ್ರ ಬಲವರ್ಧನೆಗೆ ಕ್ರಮ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ 2023–24ನೇ ಸಾಲಿನ ಆಯವ್ಯಯ ಮಂಡನೆಯಾಗಿದೆ. ಕೇಂದ್ರ ಸರ್ಕಾರ ಸಹಕಾರ ಕ್ಷೇತ್ರದ ಬಲವರ್ಧನೆಗೆ ಹಲವು ಉತ್ತೇಜನಕಾರಿ ಕ್ರಮಗಳನ್ನು ಘೋಷಿಸಿದೆ. ಉತ್ಪಾದನೆ ಕೇಂದ್ರಿತ ಹೊಸ ಸಹಕಾರ ಸಂಘಗಳನ್ನು ಪ್ರೋತ್ಸಾಹಿಸಲು ತೆರಿಗೆಯಲ್ಲಿ ಶೇ.15ರಷ್ಟು ರಿಯಾಯಿತಿ, ಟಿಡಿಎಸ್ ಇಲ್ಲದೇ 3 ಕೋಟಿ ರೂ.ವರೆಗೆ ನಗದು ಹಿಂಪಡೆಯುವಿಕೆಯ ಸೌಲಭ್ಯಗಳು ಸೇರಿದಂತೆ ಹಲವು ಉಪಯುಕ್ತ ಕ್ರಮಗಳನ್ನು ಘೋಷಿಸಿದೆ. ಇದು ಸ್ವಾಗತಾರ್ಹ ಕ್ರಮವಾಗಿದೆ. ಪ್ಯಾಕ್ಸ್‌ಗಳ ಬಲವರ್ಧನೆ, ಗಣಕೀಕರಣ, ಹೊಸ ಪ್ಯಾಕ್ಸ್‌ಗಳು, ಹಾಲು ಉತ್ಪಾದಕರ, ಮೀನುಗಾರರ ಸಹಕಾರ ಸಂಘಗಳನ್ನು ಪ್ರಾರಂಭಿಸಲು ಯೋಜನೆ ಹಾಕಿಕೊಂಡಿರುವುದರಿಂದ ಗ್ರಾಮೀಣ ಜನರಿಗೆ ಸೇವೆಯ ಜೊತೆಗೆ ಆರ್ಥಿಕ ಸ್ವಾವಲಂಬನೆ, ಕೃಷಿ–ಪಶುಸಂಗೋಪನೆ–ಮತ್ಸ್ಯ ಉತ್ಪಾದನೆಯಲ್ಲಿ ಮತ್ತಷ್ಟು ಪ್ರಗತಿ ಕಾಣಲು ಸಾಧ್ಯವಾಗಲಿದೆ. ಇದರಿಂದ ಉದ್ಯೋಗ ಸೃಷ್ಠಿಗೂ ನೇರ ಅವಕಾಶಗಳು ಸಿಗುವುದು ಸಮಾಧಾನಕರ ವಿಷಯವಾಗಿದೆ.

ಕರ್ನಾಟಕ ಬಜೆಟ್‌ನಲ್ಲಿ ಬೆಳೆ ಸಾಲದ ಶೂನ್ಯ ಬಡ್ಡಿದರದ ಸಾಲದ ಮಿತಿಯನ್ನು ಗರಿಷ್ಠ 5 ಲಕ್ಷ ರೂಗಳಿಗೆ ಏರಿಕೆ ಮಾಡಿರುವುದರಿಂದ ರಾಜ್ಯದ ರೈತರಲ್ಲಿ ಹರ್ಷ ಮೂಡಿಸಿದೆ. ಇದರಿಂದ ಅಧಿಕ ಭೂಮಿ ಹೊಂದಿದ ರೈತರಿಗೂ ಈ ಯೋಜನೆ ಸಹಕಾರಿಯಾಗಲಿದ್ದು ಸರ್ಕಾರಗಳು ಸಹಕಾರ ರಂಗದ ಮೂಲಕ ಜನರಿಗೆ ಹೆಚ್ಚು ಸೌಲಭ್ಯಗಳನ್ನು ವಿಸ್ತರಿಸುವುದು ಚಳವಳಿಯ ಪರಿಣಾಮಕಾರಿ ಬೆಳವಣಿಗೆಗೆ ಕಾರಣವಾಗಲಿದೆ. ಕೇಂದ್ರ ಮತ್ತು ರಾಜ್ಯಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮುಂಬರುವ ದಿನಗಳಲ್ಲಿ ಸಹಕಾರ ಕ್ಷೇತ್ರದ ವ್ಯಾಪ್ತಿ, ಗಾತ್ರ ಹೆಚ್ಚಿದಂತೆಲ್ಲಾ ಸೌಲಭ್ಯಗಳೂ ವಿಸ್ತರಣೆಯಾಗುತ್ತವೆ. ಇವುಗಳ ಜಾರಿಗೆ ಸಹಕಾರಿಗಳಲ್ಲಿ ಬದ್ಧತೆ, ಅಧಿಕಾರಿ/ಸಿಬ್ಬಂದಿಗಳಲ್ಲಿ ದಕ್ಷತೆ–ದೂರದೃಷ್ಠಿ ಚಿಂತನೆಗಳು ಅತ್ಯಂತ ಅವಶ್ಯವಾಗಿರುತ್ತದೆ.

ಮಾರ್ಚ್ ಮಾಹೆಯಲ್ಲಿ ಧಾರ್ಮಿಕ ಹಬ್ಬ ಚಾಂದ್ರಮಾನ ಯುಗಾದಿಯನ್ನು ಎಲ್ಲರೂ ಸಂತಸದಿಂದ ಆಚರಿಸುತ್ತಿದ್ದು, ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಆಡಳಿತಮಂಡಳಿ ಪರವಾಗಿ ಶುಭಾಷಯಗಳನ್ನು ಸಲ್ಲಿಸುತ್ತೇನೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು :
**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)



**ಬೆಂಗಳೂರು :** ಸಹಕಾರ ಸಂಘಗಳ ನಿಬಂಧಕರ ಕಚೇರಿಯ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಜಂಟಿ ನಿಬಂಧಕರಾಗಿ ಅಧಿಕಾರ ಸ್ವೀಕರಿಸಿರುವ ಶ್ರೀ ಕಲ್ಲಪ್ಪ ಓಬಣ್ಣಗೋಳ ಅವರನ್ನು ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ. ಮಹೇಂದ್ರಪ್ರಸಾದ್‌ಗೌಡ, ನಿರ್ದೇಶಕರಾದ ಡಾ||ಸಂಜಯ ಪಿ ಹೊಸಮಠ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಆಶಾಲತಾ ಪಿ. ಅವರುಗಳು ಭೇಟಿ ಮಾಡಿ ಅಭಿನಂದಿಸಿ, ಶುಭ ಕೋರಿದರು.

**ಸುಭಾಷಿತ :** ಟೀಕೆಗಳು ಸಾಯುತ್ತವೆ. ಕೆಲಸಗಳು ಉಳಿಯುತ್ತವೆ. ಬಹುಜನರು ಹೇಳಿದ ಮಾತ್ರಕ್ಕೆ ಸುಳ್ಳು ನಿಜವಾಗುವುದಿಲ್ಲ. – ಕುವೆಂಪು

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಕೇಂದ್ರ ಬಜೆಟ್ 2023-24
## 45 ಲಕ್ಷ ಕೋಟಿ ರೂ.ಗಳ ಅಭಿವೃದ್ಧಿಪರ, ಆತ್ಮನಿರ್ಭರ ಬಜೆಟ್
## ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್

**ನವದೆಹಲಿ :** ಕರ್ನಾಟಕದ ಸಾಂಪ್ರದಾಯಿಕ ಸಿರಿಧಾನ್ಯಗಳಿಗೆ ಮಹತ್ವ ನೀಡಿಕೆ, ಸಹಕಾರ ಸಂಘಗಳ ಬೆಳವಣಿಗೆಗೆ ವಿಶೇಷ ನೆರವು, ಕೃಷಿ, ನೀರಾವರಿ, ಶಿಕ್ಷಣ, ಆರೋಗ್ಯ, ಕೈಗಾರಿಕೆ, ತಂತ್ರಜ್ಞಾನ ಹೀಗೆ ಹಲವು ನವನವೀನ ಯೋಜನೆಗಳನ್ನು ಕೇಂದ್ರ ಬಜೆಟ್‌ನಲ್ಲಿ ಪ್ರಕಟಿಸುವ ಮೂಲಕ ಎಲ್ಲ ವರ್ಗದ ಜನರಿಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಿಹಿ ನೀಡಿದ್ದಾರೆ.

ಲೋಕಸಭೆಯಲ್ಲಿ ಅವರು ಮಂಡಿಸಿದ 2023–24ನೇ ಸಾಲಿನ ಬಜೆಟ್‌ನಲ್ಲಿ, 'ಇದು ಅಮೃತ ಕಾಲದ ಮೊದಲ ಬಜೆಟ್. ವಿಶ್ವವು ಭಾರತೀಯ ಆರ್ಥಿಕತೆಯನ್ನು ಪ್ರಕಾಶಮಾನವಾದ ನಕ್ಷತ್ರವೆಂದು ಗುರುತಿಸಿದೆ' ಎಂದು ವಿತ್ತ ಸಚಿವೆ ನಿರ್ಮಲ ಸೀತಾರಾಮನ್ ಬಣ್ಣಿಸಿದ್ದಾರೆ. ಬೆಲೆ ಏರಿಕೆ ಹಾಗೂ ನಿರುದ್ಯೋಗ ಸಮಸ್ಯೆಯಿಂದ ಬಸವಳಿದಿರುವ ಜನಸಮುದಾಯವನ್ನು ಸಂತೃಪ್ತಿಪಡಿಸುವ ಹಲವು ಉಪಕ್ರಮಗಳನ್ನು ಘೋಷಿಸಿದ್ದಾರೆ. ಅದೇ ವೇಳೆ, ಕೋವಿಡ್ ಅಲೆಯಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದ ಮಧ್ಯಮ ವರ್ಗ ಹಾಗೂ ಬಡವರಿಗೆ ನೀಡುತ್ತಿದ್ದ ಹಲವು ಸಬ್ಸಿಡಿಗಳ ಮೊತ್ತದಲ್ಲಿ ಕಡಿತ ಮಾಡುವುದಾಗಿ ಪ್ರಕಟಿಸಿದ್ದಾರೆ.

2020ರಲ್ಲಿ ಪರಿಚಯಿಸಿರುವ ಹೊಸ ತೆರಿಗೆ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳಲು ಹಲವು ಉತ್ತೇಜನಗಳನ್ನು ನೀಡಲಾಗಿದೆ. ವಾರ್ಷಿಕ ರೂ. 7 ಲಕ್ಷ ಆದಾಯ ಹೊಂದಿರುವವರು ಹೊಸ ತೆರಿಗೆ ಪದ್ಧತಿ ಆಯ್ಕೆ ಮಾಡಿಕೊಂಡರೆ ಏಪ್ರಿಲ್ 1ರ ನಂತರ ಯಾವುದೇ ತೆರಿಗೆ ಪಾವತಿಸಬೇಕಿಲ್ಲ. ಜತೆಗೆ ರೂ. 50 ಸಾವಿರ ಸ್ಟ್ಯಾಂಡರ್ಡ್ ಡಿಡಕ್ಷನ್ ಸಹ ದೊರಕಲಿದೆ. ತೆರಿಗೆ ಹಂತಗಳನ್ನು ಐದಕ್ಕೆ ಇಳಿಸಲಾಗಿದೆ. ಹಳೆಯ ತೆರಿಗೆ ಯೋಜನೆ ಪ್ರಕಾರ, ರೂ. 5 ಲಕ್ಷಗಳವರೆಗೆ



ವಾರ್ಷಿಕ ಆದಾಯ ಹೊಂದಿರುವ ವ್ಯಕ್ತಿ ಯಾವುದೇ ತೆರಿಗೆ ಪಾವತಿಸಬೇಕಿಲ್ಲ. 'ಈ ಪ್ರಸ್ತಾವಿತ ಬದಲಾವಣೆಗಳು ಹೊಸ ಯೋಜನೆ ಆಯ್ಕೆ ಮಾಡುವ ಎಲ್ಲ ತೆರಿಗೆ ಪಾವತಿದಾರರಿಗೆ ದೊಡ್ಡ ನಿರಾಳತೆ ಒದಗಿಸಲಿದೆ' ಎಂದು ಸಚಿವರು ಹೇಳಿದ್ದಾರೆ.

ಬಹುಸಂಖ್ಯೆಯ ತೆರಿಗೆ ಪಾವತಿದಾರರು ಈಗಲೂ ನೆಚ್ಚಿಕೊಂಡಿರುವ ಹಳೆಯ ಯೋಜನೆಯಲ್ಲಿ ಯಾವುದೇ ಮಾರ್ಪಾಡು ಮಾಡಿಲ್ಲ. ವೇತನದಾರರನ್ನು ಹೊರತುಪಡಿಸಿ ಯಾವುದೇ ತೆರಿಗೆದಾರರು ಒಮ್ಮೆ ಹೊಸ ಯೋಜನೆ ಆಯ್ಕೆ ಮಾಡಿದ ನಂತರ ಹಳೆಯ ಯೋಜನೆಗೆ ಮರಳುವಂತಿಲ್ಲ. ಹೊಸ ಯೋಜನೆಯಲ್ಲಿ ನಿಗದಿತ ಕಡಿತ ರೂ. 52,500 ಹಾಗೂ ನಿವೃತ್ತಿ ಪ್ರಯೋಜನಗಳನ್ನು ಬಿಟ್ಟು ಬೇರೆ ಕಡಿತಗಳ ಸೌಲಭ್ಯ ದೊರಕುವುದಿಲ್ಲ.

'ಹೊಸ ತೆರಿಗೆ ಯೋಜನೆ ಆಯ್ಕೆ ಮಾಡಿಕೊಂಡರೆ ರೂ. 9 ಲಕ್ಷ ವಾರ್ಷಿಕ ಆದಾಯ ಹೊಂದಿರುವ ವ್ಯಕ್ತಿ ರೂ. 45,000 ತೆರಿಗೆ ಪಾವತಿಸಬೇಕು. ಇದು ಆಕೆ ಅಥವಾ ಆತನ ಆದಾಯದ ಶೇ. 5ರಷ್ಟು ಮಾತ್ರ. ಇದರಿಂದ ಅವರು ಈಗ ಪಾವತಿಸಬೇಕಿರುವ ಮೊತ್ತದ ಶೇ. 25ರಷ್ಟು ಕಡಿತವಾಗಲಿದೆ. ಅದೇ ರೀತಿ, ರೂ.15 ಲಕ್ಷ ಆದಾಯ ಹೊಂದಿರುವ ವ್ಯಕ್ತಿ ರೂ. 1.5 ಲಕ್ಷ ಅಥವಾ ಆದಾಯದ ಶೇ. 10ರಷ್ಟು ತೆರಿಗೆ ಪಾವತಿಸಬೇಕಾಗುತ್ತದೆ' ಎಂದು ಸಚಿವರು ವಿವರಿಸಿದ್ದಾರೆ. ಯುವಕರಿಗೆ ಉದ್ಯೋಗ ಸೃಷ್ಟಿ, ಅಭಿವೃದ್ಧಿ, ಸುಸ್ಥಿರ ಆರ್ಥಿಕ ವಾತಾವರಣ ಸೃಷ್ಟಿಸಲು ಏಳು ಆದ್ಯತಾ ಕ್ಷೇತ್ರಗಳನ್ನು ಗುರುತಿಸಿ ಬಲ ತುಂಬಲಾಗಿದೆ. ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ, ಮೂಲಸೌಕರ್ಯಗಳು ಹಾಗೂ ಹೂಡಿಕೆ, ಪರಿಸರ ಬೆಳವಣಿಗೆ, ಯುವ ಶಕ್ತಿ, ಹಣಕಾಸು ವಲಯ, ಕಟ್ಟಕಡೆಯ ಫಲಾನುಭವಿಗೆ ಸೌಕರ್ಯ ಒದಗಿಸಲಾಗುತ್ತದೆ ಎಂಬ ಸಪ್ತರ್ಷಿ ಮಾರ್ಗವನ್ನು ನಿರ್ಮಲಾ ಸೀತಾರಾಮನ್ ಅವರು ತೋರಿಸಿದ್ದಾರೆ. ಸಿರಿಧಾನ್ಯಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ "ಶ್ರೀ ಅನ್ನ" ಯೋಜನೆಯನ್ನು ಘೋಷಿಸಿರುವುದರಿಂದ ಮುಂಬರುವ ದಿನಗಳಲ್ಲಿ ಸಿರಿಧಾನ್ಯಗಳ ಕೃಷಿ ಮತ್ತು ಉತ್ಪಾದನೆ, ಸಿರಿಧಾನ್ಯಗಳ ಬಳಕೆಯ ಮೂಲಕ 2023ರ ವರ್ಷವನ್ನು ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷವಾಗಿ ಆಚರಿಸಲು ಒತ್ತು ನೀಡಿದ್ದಾರೆ.

**ಸಹಕಾರ ಕ್ಷೇತ್ರಕ್ಕೆ ತೆರಿಗೆ ವಿನಾಯಿತಿ :** ಸಹಕಾರಿ ಕ್ಷೇತ್ರದ ಬಲವರ್ಧನೆಗೆ ಕೇಂದ್ರ ಸರ್ಕಾರವು ಫೆಬ್ರವರಿ 1 ರಂದು ಘೋಷಿಸಿದ ಬಜೆಟ್‌ನಲ್ಲಿ ಹಲವು ಉತ್ತೇಜನಕಾರಿ ಕ್ರಮಗಳನ್ನು ಘೋಷಿಸಿದೆ. ಉತ್ಪಾದನೆ ಕೇಂದ್ರಿತ ಹೊಸ ಸಹಕಾರಿ ಸಂಘಗಳನ್ನು ಪ್ರೋತ್ಸಾಹಿಸಲು ತೆರಿಗೆಯಲ್ಲಿ ಶೇ. 15ರಷ್ಟು ರಿಯಾಯಿತಿ, ಟಿಡಿಎಸ್ ಇಲ್ಲದೇ ರೂ. 3 ಕೋಟಿವರೆಗೆ ನಗದು ಹಿಂಪಡೆಯುವಂತಹ ಸೌಲಭ್ಯಗಳನ್ನು ಪ್ರಕಟಿಸಲಾಗಿದೆ. ಸಹಕಾರ ಸಚಿವಾಲಯಕ್ಕೆ ಸರ್ಕಾರವು 2023-24ರಲ್ಲಿ ಒಟ್ಟು ರೂ. 1,150.38 ಕೋಟಿ ಅನುದಾನ ಮೀಸಲಿಟ್ಟಿದೆ. ಕಳೆದ ಬಾರಿ ರೂ. 1,624.74 ಕೋಟಿ ಅನುದಾನ ನೀಡಲಾಗಿತ್ತು. ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಸದಸ್ಯರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನಲ್ಲಿ ಇಡುವ ನಗದು ಠೇವಣಿ ಮತ್ತು ಪಡೆಯುವ ನಗದು ಸಾಲದ ಮಿತಿಯನ್ನು ಗರಿಷ್ಠ ರೂ. 2 ಲಕ್ಷಕ್ಕೆ ಹೆಚ್ಚಿಸಿ ಬಜೆಟ್‌ನಲ್ಲಿ ವಿತ್ತ ಸಚಿವರು ಘೋಷಿಸಿದರು. ಪ್ಯಾಕ್ಸ್‌ಗಳ ಗಣಕೀಕರಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ.

ಸಹಕಾರಿ ವಲಯದಲ್ಲಿ ಉತ್ಪಾದನೆಯ ಬೆಳವಣಿಗೆಯನ್ನು ಉತ್ತೇಜಿಸುವ ಸಲುವಾಗಿ, ಏಪ್ರಿಲ್ ನಂತರ ಹೊಸ ಸಹಕಾರ ಸಂಘ ಸ್ಥಾಪನೆಯಾದರೆ ಅವುಗಳಿಗೂ ಶೇ. 15 ತೆರಿಗೆ ರಿಯಾಯಿತಿ ಸೌಲಭ್ಯ ಲಭಿಸಿದೆ. ಆದರೆ, ಆ ಸೊಸೈಟಿಗಳು 2024ರ ಮಾರ್ಚ್ ಒಳಗೆ ಉತ್ಪಾದನೆ ಆರಂಭಿಸಿದರೆ ಮಾತ್ರ ಈ ತೆರಿಗೆ ರಿಯಾಯಿತಿ ಅನ್ವಯಿಸಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಮುಂದಿನ ಐದು ವರ್ಷಗಳಲ್ಲಿ, ಈವರೆಗೆ ಸಹಕಾರ ಸಂಘಗಳು ಇಲ್ಲದ ಪಂಚಾಯಿತಿ ಮತ್ತು ಹಳ್ಳಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬಹು ಉದ್ದೇಶಿತ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಪ್ರಾಥಮಿಕ ಮೀನುಗಾರಿಕಾ ಸಂಘಗಳು ಹಾಗೂ ಹೈನುಗಾರಿಕೆ ಸಹಕಾರ ಸಂಘಗಳನ್ನು ಸ್ಥಾಪಿಸಲು ಸರ್ಕಾರ ಸೌಲಭ್ಯ ಒದಗಿಸಲಿದೆ ಎಂದು ಅವರು ಹೇಳಿದರು.

**ಸ್ವಾಗತಾರ್ಹ ಬಜೆಟ್ : ಎಸ್.ಟಿ. ಸೋಮಶೇಖರ್ :** ಕೇಂದ್ರ ಸರ್ಕಾರ ಬಜೆಟ್ ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ರೂ. ಅನುದಾನ ಘೋಷಣೆ ಮಾಡಲಾಗಿದೆ. ಇದರಿಂದ ಮಧ್ಯ ಕರ್ನಾಟಕದ ಭಾಗದ ಜಿಲ್ಲೆಗಳಿಗೆ ವರದಾನವಾಗಲಿದೆ.

ಸನ್ಮಾನ್ಯ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ, ವಿತ್ತ ಸಚಿವರಾದ ನಿರ್ಮಲಾ ಸೀತಾರಾಮನ್ ಅವರಿಗೆ ಅನಂತ ಧನ್ಯವಾದಗಳು. ಕೇಂದ್ರ ಸರ್ಕಾರದ ಈ ಸಾಲಿನ ಬಜೆಟ್, ಜನಪರ ಬಜೆಟ್. ಸಮಾಜದ ಎಲ್ಲ ವರ್ಗಗಳ ನಿರೀಕ್ಷೆಯನ್ನು ಪೂರೈಸಲಿದೆ. ಎಲ್ಲರನ್ನೂ ಗಮನದಲ್ಲಿಟ್ಟುಕೊಂಡು ರೂಪಿಸಿದ ಬಜೆಟ್ ಇದಾಗಿದೆ.

ಸಹಕಾರ ಕ್ಷೇತ್ರಕ್ಕೆ ಆದ್ಯತೆ, ರೂ. 7 ಲಕ್ಷದವರೆಗೆ ವೈಯಕ್ತಿಕ ತೆರಿಗೆ ವಿನಾಯ್ತಿ, ಕೃಷಿ ಸಾಲಕ್ಕೆ 20 ಲಕ್ಷ ಕೋಟಿ ರೂ. ಮೀಸಲು, ರಾಷ್ಟ್ರೀಯ ಡಿಜಿಟಲ್ ಗ್ರಂಥಾಲಯಗಳ ಸ್ಥಾಪನೆ ಸೇರಿದಂತೆ ಹತ್ತು ಹಲವು ಯೋಜನೆಗಳ ಘೋಷಣೆ ಮಾಡಲಾಗಿದೆ. ಒಟ್ಟಾರೆ ಈ ಬಜೆಟ್ ಎಲ್ಲಾ ವರ್ಗದ ಜನತೆಯನ್ನು ಒಳಗೊಂಡ ಜನಪರ ಬಜೆಟ್.

# ಕೇಂದ್ರ ಬಜೆಟ್ : ಕೃಷಿ ಸಾಲದ ಗುರಿ ರೂ. 20 ಲಕ್ಷ ಕೋಟಿ

**ನವದೆಹಲಿ :** ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆಯನ್ನು ಕೇಂದ್ರೀಕರಿಸಿ ಮುಂದಿನ ಹಣಕಾಸು ವರ್ಷದಲ್ಲಿ ಕೃಷಿ ಸಾಲದ ಗುರಿಯನ್ನು ರೂ. 20 ಲಕ್ಷ ಕೋಟಿಗೆ (ಶೇ. 11ರಷ್ಟು ಏರಿಕೆ) ಹೆಚ್ಚಿಸುವುದಾಗಿ ಕೇಂದ್ರ ಸರ್ಕಾರ ಘೋಷಿಸಿದೆ.

ಇದು ರೈತ ಸಮುದಾಯಕ್ಕೆ ಹೆಚ್ಚಿನ ಕೃಷಿ ಸಾಲವನ್ನು ಸಬ್ಸಿಡಿ ದರದಲ್ಲಿ ಒದಗಿಸುವ ಗುರಿಯನ್ನು ಹೊಂದಿದೆ. ರೈತ ಕೇಂದ್ರಿತ ಪರಿಹಾರ ಕ್ರಮಗಳ ಭಾಗವಾಗಿ 'ಡಿಜಿಟಲ್ ಮೂಲಸೌಕರ್ಯ' ಅಭಿವೃದ್ಧಿ, 'ಅಗ್ರಿ ಸ್ಟಾರ್ಟ್‌ಅಪ್' ಗಳ ಉತ್ತೇಜನಕ್ಕೆ 'ಕೃಷಿ ವೇಗವರ್ಧಕ ನಿಧಿ' ಸ್ಥಾಪನೆ, ತೋಟಗಾರಿಕೆಯನ್ನು ಪ್ರೋತ್ಸಾಹಿಸಲು 'ಆತ್ಮನಿರ್ಭರ ತೋಟಗಾರಿಕಾ ಕ್ಲೀನ್ ಪ್ಲಾಂಟ್' ಸೇರಿದಂತೆ ಹಲವು ಮಹತ್ವದ ಯೋಜನೆಗಳನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ.

ಮೀನುಗಾರರು, ಮೀನು ಮಾರಾಟಗಾರರು ಹಾಗೂ ಈ ಕ್ಷೇತ್ರದ ಸೂಕ್ಷ್ಮ, ಸಣ್ಣ ಉದ್ಯಮಗಳ ಚಟುವಟಿಕೆಗಳನ್ನು ಮತ್ತಷ್ಟು ಸಕ್ರಿಯಗೊಳಿಸಿ, ಮಾರುಕಟ್ಟೆ ವಿಸ್ತರಿಸಲು 'ಪ್ರಧಾನ ಮಂತ್ರಿ ಮತ್ಸ್ಯ ಸಂಪದ'ದಲ್ಲಿ ಹೊಸ ಉಪ ಯೋಜನೆಯನ್ನು ರೂ. 6,000 ಕೋಟಿ ಹೂಡಿಕೆಯ ಗುರಿಯೊಂದಿಗೆ ಜಾರಿಗೊಳಿಸಲಾಗುತ್ತದೆ. ರೈತ ಕೇಂದ್ರಿತ ಪರಿಹಾರ ಕ್ರಮಗಳ ಭಾಗವಾಗಿ 'ಡಿಜಿಟಲ್ ಮೂಲಸೌಕರ್ಯ' ಅಭಿವೃದ್ಧಿಪಡಿಸಲಾಗುವುದು. ಇದು ಎಲ್ಲ ರೈತರಿಗೂ ಮುಕ್ತವಾಗಿ ದೊರೆಯುವಂತೆ ಮಾಡಲಾಗುವುದು. ರೈತರಿಗೆ ಅಗತ್ಯವಿರುವ ಬೆಳೆ ಯೋಜನೆಗಳ ಕುರಿತ ಸಮಗ್ರ ಮಾಹಿತಿಯನ್ನು ಇದು ಒದಗಿಸುತ್ತದೆ. ಬೆಳೆಗೆ ಅಗತ್ಯವಿರುವ ಬೀಜ, ರಸಗೊಬ್ಬರ, ಕೀಟನಾಶಕದ ಮಾಹಿತಿ, ಕೃಷಿ ಸಾಲ, ಬೆಳೆ ವಿಮೆ, ಬೆಳೆಯ ಅಂದಾಜು, ಮಾರುಕಟ್ಟೆಯ ಜ್ಞಾನ, 'ಅಗ್ರಿ-ಟೆಕ್' ಉದ್ಯಮಗಳು ಮತ್ತು 'ಸ್ಟಾರ್ಟ್‌ಅಪ್' ಗಳ ಸ್ಥಾಪನೆಗೆ ಪೂರಕ ಮಾಹಿತಿ ಇದರಿಂದ ಲಭ್ಯವಾಗುತ್ತದೆ.

ಗ್ರಾಮೀಣ ಭಾಗದ ಯುವ ಉದ್ಯಮಿಗಳಿಗೆ 'ಅಗ್ರಿ ಸ್ಟಾರ್ಟ್‌ಅಪ್'ಗಳನ್ನು ಆರಂಭಿಸಲು ಉತ್ತೇಜಿಸುವುದಕ್ಕೆ 'ಕೃಷಿ ವೇಗವರ್ಧಕ ನಿಧಿ' ಸ್ಥಾಪಿಸಲಾಗುವುದು. ರೈತರು ಎದುರಿಸುತ್ತಿರುವ ಸವಾಲುಗಳಿಗೆ ಹೊಸ ಮತ್ತು ಸುಲಭ ಪರಿಹಾರ ಒದಗಿಸುವ ಗುರಿಯನ್ನು ಈ ನಿಧಿ ಹೊಂದಿದೆ. ಇದು ಕೃಷಿ ಪದ್ಧತಿಯನ್ನು ಪರಿವರ್ತಿಸಲು, ಉತ್ಪಾದಕತೆ ಮತ್ತು ಲಾಭವನ್ನು ಹೆಚ್ಚಿಸಲು ಆಧುನಿಕ ತಂತ್ರಜ್ಞಾನಗಳನ್ನು ಒದಗಿಸುತ್ತದೆ. ಹೆಚ್ಚು ಉದ್ದ ನೂಲಿನ ಹತ್ತಿಯ ಉತ್ಪಾದನೆ ವೃದ್ಧಿಸಲು ಸರ್ಕಾರಿ - ಖಾಸಗಿ ಸಹಭಾಗಿತ್ವದ (ಪಿಪಿಪಿ) ಮೂಲಕ 'ಕ್ಲಸ್ಟರ್' ಆಧಾರಿತ ವಿಧಾನವನ್ನು ಅಳವಡಿಸಿಕೊಳ್ಳಲಾಗುವುದು.

ಈ ಮೂಲಕ ರೈತರು, ಸರ್ಕಾರ ಮತ್ತು ಉದ್ಯಮಗಳು ಸಂಬಂಧಿತ ವಸ್ತುಗಳ ಪೂರೈಕೆ, ವಿಸ್ತರಣೆ ಮತ್ತು ಮಾರುಕಟ್ಟೆ ಸಂಪರ್ಕ ವಿಷಯದಲ್ಲಿ ಜತೆಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ. ಅಧಿಕ ಮೌಲ್ಯದ ತೋಟಗಾರಿಕೆ ಬೆಳೆಗಳಿಗೆ ರೋಗಮುಕ್ತ, ಗುಣಮಟ್ಟದ ನೆಡು ಸಾಮಗ್ರಿಗಳನ್ನು ಲಭ್ಯವಾಗುವಂತೆ ಮಾಡಲು 'ಆತ್ಮನಿರ್ಭರ ಕ್ಲೀನ್ ಪ್ಲಾಂಟ್ ಕಾರ್ಯಕ್ರಮ' ರೂಪಿಸಲು ರೂ. 2,200 ಕೋಟಿ ಮೀಸಲಿಡಲಾಗುವುದು ಎಂದು ತಿಳಿಸಲಾಗಿದೆ.



## ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮ

# ಸಹಕಾರದ ಸ್ಪರ್ಶ ಸರ್ವರಂಗಗಳಿಗೂ ಅಗತ್ಯ : ಜಗದೀಶ್ ಎಂ. ಕವಟಗಿಮಠ

**ಬೆಂಗಳೂರು :** ಸಹಕಾರ ರಂಗ ಇಂದು ಬೃಹದಾಕರವಾಗಿ ಬೆಳೆಯುವ ಮೂಲಕ ಅಬಲವರ್ಗದವರಿಗೆ ನೆರವಾಗುತ್ತಿದೆ. ಸಹಕಾರದ ಸ್ಪರ್ಶ ಸರ್ವರಂಗಗಳಿಗೂ ಅಗತ್ಯವಿದ್ದು, ದೇಶದ ಆರ್ಥಿಕ ರಂಗದಲ್ಲಿಯೂ ಬಹುಮುಖ ಪಾತ್ರವನ್ನು ನಿರ್ವಹಿಸುತ್ತಿದೆ ಎಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಉಪಾಧ್ಯಕ್ಷರಾದ ಜಗದೀಶ್ ಎಂ.ಕವಟಗಿಮಠ ರವರು ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಪತ್ತಿನ ಮಹಾಮಂಡಳ ಹಾಗು ಬೆಂಗಳೂರು ಜಿಲ್ಲಾ ಸಹಕಾರ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಬೆಂಗಳೂರು ವಿಭಾಗದ ಪತ್ತಿನ ಸಹಕಾರ ಸಂಘಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಏರ್ಪಡಿಸಿದ್ದ ರಾಜ್ಯಮಟ್ಟದ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಕರ್ನಾಟಕದಲ್ಲಿ ಸಹಕಾರಿ ಆಸ್ಪತ್ರೆಗಳು, ಸಹಕಾರಿ ಕ್ರೀಡಾ ಶಾಲೆಗಳು ಸೇರಿದಂತೆ ವಿವಿಧ ರೀತಿಯ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳ ಸೇವೆ ಹಾಗೂ ಪ್ರಯೋಜನಗಳ ಕುರಿತು ಯುವಕರಲ್ಲಿ ಅರಿವು ಮೂಡಿಸಲು ಸಹಕಾರಿಗಳು ಶ್ರಮವಹಿಸಬೇಕು. ಹಾಗೆಯೇ ಪತ್ತಿನ ವಲಯದಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಆಡಳಿತ ಮಂಡಳಿ ಸದಸ್ಯರು ಹಾಗು ಅಧಿಕಾರಿಗಳು ಗಮನ ನೀಡಿ ಅವುಗಳಿಗೆ ಪರಿಹಾರ ಮಾರ್ಗ ಕಂಡು ಕೊಳ್ಳಲು ಸಲಹೆ ಮಾಡಿದರು.

ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಉಪಾಧ್ಯಕ್ಷರಾದ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ ಉದ್ಘಾಟಿಸಿದರು. ನಂತರ ಮಾತನಾಡಿ, ಪತ್ತಿನ ಸಹಕಾರ ಮಹಾಮಂಡಳ ಹಾಗು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಎರಡು ಸಂಸ್ಥೆಗಳು ಸಹ ಸಹಕಾರ ಚಳವಳಿಯ ಬೆಳವಣಿಗೆಗೆ ಪೂರಕವಾದಂತಹ ತರಬೆತಿಗಳನ್ನು ಆಯೋಜಿಸುತ್ತಿದ್ದು, ಇದರ ಸದುಪಯೋಗ ಪಡೆಯಲು ತಿಳಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಬಿ.ಡಿ. ಭೂಕಾಂತ್ ರವರು ಮಾತನಾಡಿ, ಸಹಕಾರ ಕ್ಷೇತ್ರ ಸರ್ವಜನರ ಹಿತ ಕಾಪಾಡುವಲ್ಲಿ ತನ್ನದೆಯಾದಂತಹ ಪಾತ್ರವನ್ನು ನಿರ್ವಹಿಸಿಕೊಂಡು ಬಂದಿದ್ದು, ಮಹಾಮಂಡಳವು ವಿವಿಧ ವಲಯಗಳಿಗೆ ಅಗತ್ಯವಿರುವ ತರಬೇತಿಗಳ ಆಯೋಜನೆಯನ್ನು ಮಾಡುತ್ತಿದೆ. ಇಲ್ಲಿ ತಿಳಿಯುವ ಅಂಶಗಳನ್ನು ತಮ್ಮ ಸಹಕಾರ ಸಂಘಗಳಲ್ಲಿ ಅಳವಡಿಸಿಕೊಳ್ಳುವ ಮೂಲಕ ತರಬೇತಿಯ ಪ್ರಯೋಜನ ಪಡೆಯಲು ತಿಳಿಸಿದರು.

ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಎಸ್.ಅರಳಿ ಸೂರ್ಯಕಾಂತ್ ಮಾತನಾಡಿ, ಮಹಾಮಂಡಳವು ಪ್ರಸ್ತುತ ಸಹಕಾರ ಸಂಘಗಳಿಗೆ ಅಗತ್ಯವಿರುವ ವಿಷಯಗಳ ಆಧಾರಿತವಾಗಿ ತರಬೇತಿ ವ್ಯವಸ್ಥೆ ಮಾಡುತ್ತಿದೆ. ಇಂದು ಸಹಕಾರ ವಲಯದಲ್ಲಿ ಪತ್ತಿನ ವಲಯ ವಿಶೇಷವಾಗಿ ಉತ್ತಮವಾಗಿ ಕಾರ್ಯವರ್ಹಣೆಯ ಮೂಲಕ ಹಲವಾರು ವರ್ಗದ ಜನರ ಆರ್ಥಿಕ ಸ್ವಾವಲಂಬನೆಗೆ ನೆರವಾಗುತ್ತಿದ್ದು, ಇಂತಹ ಸಂಸ್ಥೆಗಳ ಬೆಳವಣಿಗೆಗೆ ತರಬೇತಿ ಪೂರಕ ಎಂದರು.

ಕಾರ್ಯಕ್ರಮದಲ್ಲಿ ಮಹಾಮಂಡಳದ ನಿರ್ದೇಶಕರುಗಳಾದ ಎ.ಸಿ. ನಾಗರಾಜು, ಆರ್. ರಾಮರೆಡ್ಡಿ, ಜೆ.ಎಂ. ಶಿವಪ್ರಸಾದ್, ರಘು. ವಿ. ಹಾಗೂ ಸಹಕಾರ ಸಂಘಗಳ ಅಪರ ನಿಂಬಂಧಕರು ಹಾಗೂ ವಿಶೇಷ ಕರ್ತವ್ಯ ಅಧಿಕಾರಿ ಎ.ಸಿ. ದಿವಾಕರ್‌ರವರು, ಪತ್ತಿನ ಸಹಕಾರ ಮಹಾಮಂಡಳದ ಮುಖ್ಯಕಾರ್ಯನಿರ್ವಹಾಧಿಕಾರಿ ಆಶಾಲತಾ ಪಿ. ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಮುಖ್ಯಕಾರ್ಯನಿರ್ವಹಾಧಿಕಾರಿ ಲಕ್ಷ್ಮಿ ಮತ್ತಿತರರು ಉಪಸ್ಥಿತರದ್ದರು.

ಕಾರ್ಯಕ್ರಮದಲ್ಲಿ ಮಹಾಮಂಡಳದ ಕಾರ್ಯದರ್ಶಿ ಲಕ್ಷ್ಮಿಪತಯ್ಯ ನವರು ಮಹಾಮಂಡಳದ ಕಾರ್ಯಚಟುವಟಿಕೆಗಳ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನು ಸ್ವಾಗತಿಸಿದರು.

# "ಸಹಕಾರದಿಂದ ಸಮೃದ್ಧಿ" – ಸಹಕಾರಿ ಆಧಾರಿತ ಆರ್ಥಿಕ ಅಭಿವೃದ್ಧಿಗೆ ಉತ್ತೇಜನ : ಕೇಂದ್ರ ಸಹಕಾರ ಸಚಿವ ಅಮಿತ್ ಶಾ

**ನವದೆಹಲಿ :** ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು "ಸಹಕಾರದಿಂದ ಸಮೃದ್ಧಿ"ಯೊಂದಿಗೆ ಸಹಕಾರ ಆಧಾರಿತ ಆರ್ಥಿಕ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಉತ್ತೇಜನಕಾರಿ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಲೋಕಸಭೆಯಲ್ಲಿ ಸದಸ್ಯರ ಪ್ರಶ್ನೆಗೆ ಉತ್ತರಿಸುತ್ತಾ ಪ್ರಮುಖ ವಿಷಯಗಳನ್ನು ವ್ಯಕ್ತಪಡಿಸಿದ್ದಾರೆ. ಕಳೆದ ವಾರ ಸಂಸತ್ ಅಧಿವೇಶನದಲ್ಲಿ ಮಾತನಾಡಿದ ಅವರು ನೂತನ ರಾಷ್ಟ್ರೀಯ ಸಹಕಾರ ನೀತಿ ಶೀಘ್ರವೇ ಜಾರಿಗೆ ಬರಲಿದ್ದು ಅಂತಿಮ ಕರಡು ಸಿದ್ಧವಾಗುತ್ತಿದೆ ಎಂದು ತಿಳಿಸಿರುವ ಅವರು, ನೂತನ ರಾಷ್ಟ್ರೀಯ ನೀತಿಯು ದೇಶದಲ್ಲಿ ಸಹಕಾರ ಚಳುವಳಿಯನ್ನು ಬಲಪಡಿಸಲು ಮತ್ತು ಬೇರುಮಟ್ಟದವರೆಗೆ ಅದರ ವ್ಯಾಪ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂದು ವಿವರಿಸಿದ್ದಾರೆ.

ಲೋಕಸಭೆಯಲ್ಲಿ 'ಸಹಕಾರದ ರಾಷ್ಟ್ರೀಯ ನೀತಿ' ಕುರಿತು ಲಿಖಿತ ಪ್ರಶ್ನೆಗೆ ಉತ್ತರ ನೀಡಿದ ಸಹಕಾರ ಸಚಿವ ಶ್ರೀ ಅಮಿತ್ ಶಾ ಅವರು, 2ನೇ ಸೆಪ್ಟೆಂಬರ್ 2022 ರಂದು ಶ್ರೀ ಸುರೇಶ್ ಪ್ರಭಾಕರ ಪ್ರಭು ಅವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯಮಟ್ಟದ ಸಮಿತಿಯನ್ನು ರಚಿಸಲಾಗಿದೆ. ಹೊಸ ರಾಷ್ಟ್ರೀಯ ಸಹಕಾರ ನೀತಿಯನ್ನು ರೂಪಿಸಲು ಸಹಕಾರಿ ಕ್ಷೇತ್ರದ ತಜ್ಞರು, ರಾಷ್ಟ್ರೀಯ/ರಾಜ್ಯ/ಜಿಲ್ಲೆ/ಪ್ರಾಥಮಿಕ ಮಟ್ಟದ ಸಹಕಾರ ಸಂಘಗಳ ಪ್ರತಿನಿಧಿಗಳು, ಕಾರ್ಯದರ್ಶಿಗಳು (ಸಹಕಾರ) ಮತ್ತು ರಾಜ್ಯಗಳು/ UTಗಳಿಂದ RCS, ಕೇಂದ್ರ ಸಚಿವಾಲಯಗಳು/ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡಿರುತ್ತದೆ. ಹೊಸ ರಾಷ್ಟ್ರೀಯ ಸಹಕಾರ ನೀತಿಯ ರಚನೆಯು 'ಸಹಕಾರ ಸೇ ಸಮೃದ್ಧಿ'ಯ ದೃಷ್ಟಿಕೋನವನ್ನು ಸಾಕಾರಗೊಳಿಸಲು, ಸಹಕಾರಿ ಆಧಾರಿತ ಆರ್ಥಿಕ ಅಭಿವೃದ್ಧಿ ಮಾದರಿಯನ್ನು ಉತ್ತೇಜಿಸಲು, ದೇಶದಲ್ಲಿ ಸಹಕಾರ ಚಳುವಳಿಯನ್ನು ಬಲಪಡಿಸಲು ಮತ್ತು ತಳಮಟ್ಟದವರೆಗೆ ಅದರ ವ್ಯಾಪ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಈ ನಿಟ್ಟಿನಲ್ಲಿ, ಈ ಹಿಂದೆ ಮಧ್ಯಸ್ಥಗಾರರೊಂದಿಗೆ ಸಮಾಲೋಚನೆಗಳನ್ನು ನಡೆಸಲಾಯಿತು ಮತ್ತು ಹೊಸ ನೀತಿಯನ್ನು ರೂಪಿಸಲು ಕೇಂದ್ರ ಸಚಿವಾಲಯಗಳು / ಇಲಾಖೆಗಳು, ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳು, ರಾಷ್ಟ್ರೀಯ ಸಹಕಾರಿ ಒಕ್ಕೂಟಗಳು, ಸಂಸ್ಥೆಗಳು ಮತ್ತು ಸಾರ್ವಜನಿಕರಿಂದ ಸಲಹೆಗಳನ್ನು ಆಹ್ವಾನಿಸಲಾಗಿದೆ. ರಾಷ್ಟ್ರೀಯ ಮಟ್ಟದ ಸಮಿತಿಯು ಹೊಸ ನೀತಿಯ ಕರಡನ್ನು ರೂಪಿಸಲು ಸಂಯೋಜಿತ ಪ್ರತಿಕ್ರಿಯೆ, ನೀತಿ ಸಲಹೆಗಳು ಮತ್ತು ಶಿಫಾರಸುಗಳನ್ನು ವಿಶ್ಲೇಷಿಸುತ್ತದೆ.

ಸಹಕಾರ ಸಚಿವಾಲಯದ ರಚನೆಯ ನಂತರ, ಭಾರತದ ಸಹಕಾರಿ ವಾಸ್ತುಶಿಲ್ಪವನ್ನು ದೇಶದ ಆರ್ಥಿಕ ಮತ್ತು ಸಾಮಾಜಿಕ ಅಗತ್ಯಗಳೊಂದಿಗೆ ಸಿಂಕ್ರೊನೈಸ್ ಮಾಡಲು ಸರ್ಕಾರವು ಈ ಕೆಳಗಿನವುಗಳನ್ನು ಒಳಗೊಂಡಂತೆ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ :



1. **ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಗಣಕೀಕರಣ :** ರೂ. 2,516 ಕೋಟಿ ವೆಚ್ಚದಲ್ಲಿ ERP ಆಧಾರಿತ ಸಾಮಾನ್ಯ ರಾಷ್ಟ್ರೀಯ ಸಾಫ್ಟ್‌ವೇರ್‌ನಲ್ಲಿ 63,000 ಕ್ರಿಯಾತ್ಮಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಅನ್ನು ಅಳವಡಿಕೆ ಮಾಡುವ ಪ್ರಕ್ರಿಯೆ ಪ್ರಾರಂಭವಾಗಿದೆ.
2. **ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮಾದರಿ ಬೈಲಾಗಳು :** ಡೈರಿ, ಮೀನುಗಾರಿಕೆ, ಗೋಡೌನ್‌ಗಳ ಸ್ಥಾಪನೆ, LPG/ಪೆಟ್ರೋಲ್/ಹಸಿರು ಶಕ್ತಿ ವಿತರಣಾ ಏಜೆನ್ಸಿಯಂತಹ 25 ಕ್ಕೂ ಹೆಚ್ಚು ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು PACS ಅನ್ನು ಸಕ್ರಿಯಗೊಳಿಸಲು ಆಯಾ ರಾಜ್ಯ ಸಹಕಾರಿ ಕಾಯ್ದೆಯ ಪ್ರಕಾರ ಅವುಗಳನ್ನು ಅಳವಡಿಸಿಕೊಳ್ಳಲು ಮಾದರಿ ಬೈಲಾಗಳನ್ನು ಸಿದ್ಧಪಡಿಸಲಾಗಿದೆ ಮತ್ತು ಪ್ರಸಾರ ಮಾಡಲಾಗಿದೆ. ಬ್ಯಾಂಕಿಂಗ್ CSC ಇತ್ಯಾದಿ.
3. **ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಸಾಮಾನ್ಯ ಸೇವಾ ಕೇಂದ್ರಗಳಾಗಿ (CSC) :** ಸಹಕಾರ ಸಚಿವಾಲಯ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ನಬಾರ್ಡ್ ಮತ್ತು CSC-SPVಗಳ ನಡುವೆಗಳ ಕಾರ್ಯಸಾಧ್ಯತೆಯನ್ನು ಸುಧಾರಿಸಲು, ಗ್ರಾಮ ಮಟ್ಟದಲ್ಲಿ ಇ-ಸೇವೆಗಳನ್ನು ಒದಗಿಸಲು CSC ಗಳ ಕಾರ್ಯನಿರ್ವಹಣೆಯನ್ನು ಸುಲಭಗೊಳಿಸಲು ಸಹಿ ಹಾಕಲಾಗಿದೆ. ಉದ್ಯೋಗ ಸೃಷ್ಟಿಸುತ್ತವೆ.
4. **ರಾಷ್ಟ್ರೀಯ ಸಹಕಾರಿ ಡೇಟಾಬೇಸ್ :** ದೇಶದ ಸಹಕಾರಿ ಸಂಸ್ಥೆಗಳ ಅಧಿಕೃತ ಮತ್ತು ನವೀಕರಿಸಿದ ದತ್ತಾಂಶ ಭಂಡಾರವನ್ನು ಸಿದ್ಧಪಡಿಸುವುದು ನೀತಿ ರಚನೆ ಮತ್ತು ಅನುಷ್ಠಾನದಲ್ಲಿ ಪಾಲುದಾರರಿಗೆ ಅನುಕೂಲವಾಗುವಂತೆ ಪ್ರಾರಂಭಿಸಲಾಗಿದೆ.
5. **ರಾಷ್ಟ್ರೀಯ ಸಹಕಾರ ನೀತಿ :** 'ಸಹಕಾರ್–ಸೇ–ಸಮೃದ್ಧಿ'ಯ ದೃಷ್ಟಿಕೋನವನ್ನು ಸಾಕಾರಗೊಳಿಸಲು ಅನುವು ಮಾಡಿಕೊಡುವ

ಪರಿಸರ ವ್ಯವಸ್ಥೆಯನ್ನು ರಚಿಸಲು ಹೊಸ ಸಹಕಾರ ನೀತಿಯನ್ನು ರೂಪಿಸಲು ದೇಶದಾದ್ಯಂತದ ತಜ್ಞರು ಮತ್ತು ಮಧ್ಯಸ್ಥಗಾರರನ್ನು ಒಳಗೊಂಡ ರಾಷ್ಟ್ರೀಯ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

6. **MSCS ಕಾಯಿದೆಯ ತಿದ್ದುಪಡಿ, 2002:** 97ನೇ ಸಾಂವಿಧಾನಿಕ ತಿದ್ದುಪಡಿಯ ನಿಬಂಧನೆಗಳನ್ನು ಅಳವಡಿಸಲು, ಆಡಳಿತವನ್ನು ಬಲಪಡಿಸಲು, ಪಾರದರ್ಶಕತೆಯನ್ನು ಹೆಚ್ಚಿಸಲು, ಹೊಣೆಗಾರಿಕೆಯನ್ನು ಹೆಚ್ಚಿಸಲು ಮತ್ತು ಬಹು ರಾಜ್ಯ ಸಹಕಾರ ಸಂಘಗಳಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಸುಧಾರಿಸಲು ಕೇಂದ್ರೀಯ ಆಡಳಿತದ MSCS ಕಾಯಿದೆ, 2002 ಅನ್ನು ತಿದ್ದುಪಡಿ ಮಾಡಲು ಸಂಸತ್ತಿನಲ್ಲಿ ಮಸೂದೆಯನ್ನು ಪರಿಚಯಿಸಲಾಯಿತು.
7. **ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ :** SHG ಗಾಗಿ 'ಸ್ವಯಂಶಕ್ತಿ ಸಹಕಾರ' ದಂತಹ ವಿವಿಧ ವಲಯಗಳಲ್ಲಿ NCDC ಯಿಂದ ಪ್ರಾರಂಭಿಸಲಾದ ಸಹಕಾರಿಗಳಿಗೆ ಹೊಸ ಯೋಜನೆಗಳು; ದೀರ್ಘಾವಧಿ ಕೃಷಿ ಸಾಲಕ್ಕಾಗಿ 'ದೀರ್ಘವಧಿ ಕೃಷಿ ಸಹಕಾರ'; ಹೈನುಗಾರಿಕೆಗೆ 'ಡೈರಿ ಸಹಕಾರ' ಮತ್ತು ಮೀನುಗಾರಿಕೆಗೆ 'ನೀಲ್ ಸಹಕಾರ'. ಒಟ್ಟು ಆರ್ಥಿಕ ನೆರವು ರೂ. FY 2021-22 ರಲ್ಲಿ 34,221 ಕೋಟಿಗಳನ್ನು ವಿತರಿಸಲಾಗಿದೆ.
8. **ಕ್ರೆಡಿಟ್ ಗ್ಯಾರಂಟಿ ಫಂಡ್ ಟ್ರಸ್ಟ್‌ನಲ್ಲಿ ಸದಸ್ಯ ಸಾಲ ನೀಡುವ ಸಂಸ್ಥೆಗಳು :** ಸಾಲ ನೀಡುವಲ್ಲಿ ಸಹಕಾರಿಗಳ ಪಾಲನ್ನು ಹೆಚ್ಚಿಸಲು CGTMSE ಯೋಜನೆಯಲ್ಲಿ MLIಗಳಾಗಿ ಸೂಚಿಸಲಾದ ಅಲ್ಲದೇ UCB ಗಳು, StCB ಗಳು ಮತ್ತು DCCB ಗಳು.
9. **GeM ಪೋರ್ಟಲ್‌ನಲ್ಲಿ ಸಹಕಾರಿಗಳು 'ಖರೀದಿದಾರರು':** ಸಹಕಾರಿ ಸಂಸ್ಥೆಗಳು GeMನಲ್ಲಿ 'ಖರೀದಿದಾರ' ಎಂದು ನೋಂದಾಯಿಸಲು ಅನುಮತಿಸಲಾಗಿದೆ, ಆರ್ಥಿಕ ಖರೀದಿಗಳು ಮತ್ತು ಹೆಚ್ಚಿನ ಪಾರದರ್ಶಕತೆಗೆ ಅನುಕೂಲವಾಗುವಂತೆ ಸುಮಾರು 40 ಲಕ್ಷ ಮಾರಾಟಗಾರರಿಂದ ಸರಕುಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳಲು ಅನುವು ಮಾಡಿಕೊಡುತ್ತದೆ.
10. **ಸಹಕಾರ ಸಂಘಗಳ ಮೇಲಿನ ಹೆಚ್ಚುವರಿ ಶುಲ್ಕ ಕಡಿತ :** ರೂ.ಗಳ ನಡುವಿನ ಆದಾಯ ಹೊಂದಿರುವ ಸಹಕಾರಿ ಸಂಘಗಳಿಗೆ 12 % ರಿಂದ 7% ಕ್ಕೆ ಸರ್ಚಾರ್ಜ್ ಕಡಿಮೆಯಾಗಿದೆ. 1 ರಿಂದ 10 ಕೋಟಿ
11. **ಕನಿಷ್ಠ ಪರ್ಯಾಯ ತೆರಿಗೆಯಲ್ಲಿನ ಕಡಿತ :** ಸಹಕಾರಿ ಸಂಸ್ಥೆಗಳಿಗೆ 18.5% ರಿಂದ 15%ಗೆ MAT ಕಡಿಮೆಯಾಗಿದೆ.
12. **IT ಕಾಯಿದೆಯ ಸೆಕ್ಷನ್ 269ST ಅಡಿಯಲ್ಲಿ ಪರಿಹಾರ :** IT ಕಾಯಿದೆಯ ಸೆಕ್ಷನ್ 269ST ಅಡಿಯಲ್ಲಿ ಸಹಕಾರಿಗಳಿಂದ ಪ್ರತಿ ವ್ಯವಹಾರದಲ್ಲಿನ ತೊಂದರೆಗಳನ್ನು ತೆಗೆದುಹಾಕಲು ಸ್ಪಷ್ಟೀಕರಣವನ್ನು ನೀಡಲಾಗಿದೆ.
13. **ಹೊಸ ಸಹಕಾರಿಗಳಿಗೆ ತೆರಿಗೆ ದರವನ್ನು ಕಡಿಮೆಗೊಳಿಸುವುದು:** ಮಾರ್ಚ್ 31, 2024 ರವರೆಗೆ ಉತ್ಪಾದನಾ ಚಟುವಟಿಕೆಗಳನ್ನು ಪ್ರಾರಂಭಿಸುವ ಹೊಸ ಸಹಕಾರಿ ಸಂಸ್ಥೆಗಳಿಗೆ ಪ್ರಸ್ತುತ ದರದ 30% ವರೆಗಿನ ಹೆಚ್ಚುವರಿ ಶುಲ್ಕದೊಂದಿಗೆ ಹೋಲಿಸಿದರೆ, 15% ರಷ್ಟು ಕಡಿಮೆ ತೆರಿಗೆ ದರವನ್ನು ವಿಧಿಸಲು ಯೂನಿಯನ್ ಬಜೆಟ್ 2023-24 ರಲ್ಲಿ ಘೋಷಣೆ ಮಾಡಲಾಗಿದೆ.
14. **ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಮತ್ತು PCARD :** ಗಳಿಂದ ನಗದು ರೂಪದಲ್ಲಿ ಠೇವಣಿ ಮತ್ತು ಸಾಲಗಳ ಮಿತಿಯಲ್ಲಿ ಹೆಚ್ಚಳ : 2023-24ರ ಕೇಂದ್ರ ಬಜೆಟ್‌ನಲ್ಲಿ ಮಿತಿಯನ್ನು ರೂ.ನಿಂದ ಹೆಚ್ಚಿಸಲು ಘೋಷಣೆ ಮಾಡಲಾಗಿದೆ. 20,000 ರಿಂದ ರೂ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಮತ್ತು PCARDB ಗಳಿಂದ ನಗದು ರೂಪದಲ್ಲಿ ಠೇವಣಿ ಮತ್ತು ಸಾಲಗಳಿಗೆ ಪ್ರತಿ ಸದಸ್ಯರಿಗೆ 2 ಲಕ್ಷ ರೂ.
15. **ಟಿಡಿಎಸ್‌ಗೆ ಮಿತಿ ಹೆಚ್ಚಳ :** ಸಹಕಾರಿ ಸಂಸ್ಥೆಗಳಿಗೆ ನಗದು ಹಿಂಪಡೆಯುವ ಮಿತಿಯನ್ನು ರೂ.ನಿಂದ ಹೆಚ್ಚಿಸಲು 2023-24ರ ಕೇಂದ್ರ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. 1 ಕೋಟಿ ರೂ. ಟಿಡಿಎಸ್‌ಗೆ ಒಳಪಡದೆ ವರ್ಷಕ್ಕೆ 3 ಕೋಟಿ ರೂ.
16. **ಸಕ್ಕರೆ ಸಹಕಾರಿ ಕಾರ್ಖಾನೆಗಳಿಗೆ ಪರಿಹಾರ :** ಸಕ್ಕರೆ ಸಹಕಾರಿ ಕಾರ್ಖಾನೆಗಳು ರೈತರಿಗೆ ನ್ಯಾಯಯುತ ಮತ್ತು ಲಾಭದಾಯಕ ಅಥವಾ ರಾಜ್ಯ ಸಲಹೆಯ ಬೆಲೆಯವರೆಗೆ ಹೆಚ್ಚಿನ ಕಬ್ಬಿನ ಬೆಲೆಯನ್ನು ಪಾವತಿಸಲು ಹೆಚ್ಚುವರಿ ಆದಾಯ ತೆರಿಗೆಗೆ ಒಳಪಡುವುದಿಲ್ಲ.
17. **ಸಕ್ಕರೆ ಸಹಕಾರಿ ಕಾರ್ಖಾನೆಗಳ ದೀರ್ಘಕಾಲದ ಬಾಕಿ ಸಮಸ್ಯೆಗಳ ಪರಿಹಾರ :** 2016-17ರ ಮೌಲ್ಯಮಾಪನ ವರ್ಷಕ್ಕೆ ಮುಂಚಿನ ಅವಧಿಗೆ ಸಕ್ಕರೆ ಸಹಕಾರಿ ಸಂಘಗಳು ಕಬ್ಬು ರೈತರಿಗೆ ತಮ್ಮ ಪಾವತಿಗಳನ್ನು ವೆಚ್ಚವಾಗಿ ಕ್ಲೈಮ್ ಮಾಡಲು ಅವಕಾಶ ಮಾಡಿಕೊಡಲು 2023-24ರ ಕೇಂದ್ರ ಬಜೆಟ್‌ನಲ್ಲಿ ಮಾಡಲಾದ ಘೋಷಣೆ. ರೂ.10,000 ಕೋಟಿ.
18. **ಹೊಸ ರಾಷ್ಟ್ರೀಯ ಮಲ್ಟಿ-ಸ್ಟೇಟ್ ಕೋಆಪರೇಟಿವ್ ಸೀಡ್ ಸೊಸೈಟಿ :** MSCS ಕಾಯಿದೆ, 2002ರ ಅಡಿಯಲ್ಲಿ ಹೊಸ ಅಪೆಕ್ಸ್ ರಾಷ್ಟ್ರೀಯ ಬಹು-ರಾಜ್ಯ ಸಹಕಾರಿ ಬೀಜ ಸೊಸೈಟಿಯನ್ನು ಗುಣಮಟ್ಟದ ಬೀಜ ಕೃಷಿ, ಉತ್ಪಾದನೆ ಮತ್ತು ವಿತರಣೆಗಾಗಿ ಒಂದೇ ಬ್ರ್ಯಾಂಡ್ ಅಡಿಯಲ್ಲಿ ಆಶ್ರಯ ಸಂಸ್ಥೆಯಾಗಿ ಸ್ಥಾಪಿಸಲಾಗಿದೆ.
19. **ಹೊಸ ರಾಷ್ಟ್ರೀಯ ಮಲ್ಟಿ-ಸ್ಟೇಟ್ ಕೋಆಪರೇಟಿವ್ ಆರ್ಗ್ಯಾನಿಕ್ ಸೊಸೈಟಿ :** MSCS ಕಾಯಿದೆ, 2002 ರ ಅಡಿಯಲ್ಲಿ ಹೊಸ ಅಪೆಕ್ಸ್ ರಾಷ್ಟ್ರೀಯ ಬಹು-ರಾಜ್ಯ ಸಹಕಾರಿ ಸಾವಯವ ಸಂಘವನ್ನು ಸ್ಥಾಪಿಸಲಾಗಿದೆ, ಪ್ರಮಾಣೀಕೃತ ಮತ್ತು ಅಧಿಕೃತ ಸಾವಯವ ಉತ್ಪನ್ನಗಳನ್ನು ಉತ್ಪಾದಿಸಲು, ವಿತರಿಸಲು ಮತ್ತು ಮಾರುಕಟ್ಟೆ ಮಾಡಲು ಆಶ್ರಯ ಸಂಸ್ಥೆಯಾಗಲಿದೆ.
20. **ಹೊಸ ರಾಷ್ಟ್ರೀಯ ಬಹು-ರಾಜ್ಯ ಸಹಕಾರ ರಫ್ತು ಸೊಸೈಟಿ :** ಸಹಕಾರಿ ವಲಯದಿಂದ ರಫ್ತಿಗೆ ಒತ್ತು ನೀಡಲು MSCS ಕಾಯಿದೆ, 2002ರ ಅಡಿಯಲ್ಲಿ ಹೊಸ ಅಪೆಕ್ಸ್ ರಾಷ್ಟ್ರೀಯ ಬಹು-ರಾಜ್ಯ ಸಹಕಾರ ರಫ್ತು ಸಂಘವನ್ನು ಆಶ್ರಯ ಸಂಸ್ಥೆಯಾಗಿ ಸ್ಥಾಪಿಸಲಾಗಿದೆ ಎಂದು ಸಹಕಾರ ಸಚಿವರು ಹೇಳಿದರು.



# ಯುಗಾದಿ ಹಬ್ಬದೊಂದಿಗೆ ಹೊಸ ವರ್ಷ ಆಚರಿಸೋಣ ಬನ್ನಿ

**ಯುಗ ಯುಗಾದಿ ಕಳೆದರೂ ಯುಗಾದಿ**
**ಮರಳಿ ಬರುತಿದೆ**
**ಹೊಸ ವರುಷಕೆ ಹೊಸ ಹರುಷವ**
**ಹೊಸತು ಹೊಸತು ತರುತಿದೆ**

ಜ್ಞಾನ ಪೀಠ ಪ್ರಶಸ್ತಿ ವಿಜೇತ ಕವಿ ದ ರಾ ಬೇಂದ್ರೆ ಅವರು ಬರೆದ ಈ ಸಾಲುಗಳು ಇಂದಿಗೂ ಹಸಿರು.

ಯುಗಾದಿ ಹಬ್ಬ ಇದು ಹಿಂದೂಗಳ ಹೊಸ ವರ್ಷ ಆಚರಣೆಯೊಂದಿಗೆ ನಡೆಯುವ ಮೊದಲ ಹಬ್ಬ.

ಮಾನವ ಕುಲಕೋಟಿ ಹಾಗೂ ಸಕಲ ಚರಾ ಚರಾ ಜೀವ ಜಂತುಗಳ ಬೆಳವಣಿಗಗೆ ಸಕಲ ಸೌಲಭ್ಯಗಳನ್ನು ಕಲ್ಪಿಸಿದ ಪ್ರಕೃತಿ ಮಾತೆಯನ್ನು ಸ್ಮರಿಸಿ ಪೂಜಿಸುವುದೆ ಯುಗಾದಿಹಬ್ಬದ ವಿಶೇಷ.

ಪ್ರಕೃತಿ ಮಾತೆ ನಮಗೆ ಗಾಳಿ, ಬೆಳಕು, ನೀರು, ಭೂಮಿ, ಆಹಾರ ಸಹಿತ ಸರ್ವಸ್ವವನ್ನೂ ನೀಡಿದೆ ಆ ಮಾತೆಯನ್ನು ನಾವು ಎಷ್ಟು ಸ್ಮರಿಸಿದರು ಕಮ್ಮಿಯೇ ನಮ್ಮನ್ನು ಜತನದಿಂದ ಕಾಪಾಡುವ ಪ್ರಕೃತಿಮಾತೆಯನ್ನು ಮುಂದಿನ ಪೀಳಿಗೆಗಾದರೂ ಕಾಪಾಡುವುದು ನಮ್ಮ ಆದ್ಯ ಕರ್ತವ್ಯ. ಈ ಸಂದೇಶವನ್ನು ಸಾರುವುದೆ ಯುಗಾದಿ ಹಬ್ಬದ ವಿಶೇಷಗಳಲ್ಲಿ ಒಂದಾಗಿದೆ.

ಇಂದಿನ ಆಧುನಿಕ ಯುಗದಲ್ಲಿ ಗಾಳಿ, ನೀರು, ಪರಿಸರ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಮಾಲಿನ್ಯ ಹೊಂದುತ್ತಿದ್ದು, ಅಭಿವೃದ್ದಿಯ ಹೆಸರಿನಲ್ಲಿ ಕಾಡುಗಳನ್ನು ಎಗ್ಗಿಲ್ಲದೆ ನಾಶ ಮಾಡಲಾಗುತ್ತದೆ ಭವಿಷ್ಯದಲ್ಲಿ ಇದರ ದುಷ್ಪರಿಣಾಮ ಮಾನವ ಜನಾಂಗವೇ ಎದುರಿಸಬೇಕಾಗುತ್ತದೆ. ಆ ಹಿನ್ನಲೆಯಲ್ಲಿ ಪ್ರಕೃತಿ ಮಾತೆಯನ್ನು ಪೂಜಿಸುವ ಯುಗಾದಿ ಹಬ್ಬದಂದು ಪರಿಸರ ರಕ್ಷಣೆಯ ಸಂದೇಶಗಳನ್ನು ಸಾರುವ ಕೆಲಸ ಪ್ರತಿ ಮನೆಯಿಂದ ನಡೆದರೆ ಈ ಹಬ್ಬ ಇನ್ನಷ್ಟು ಅರ್ಥಪೂರ್ಣವಾಗುತ್ತದೆ.

ಹಬ್ಬದ ಸಿದ್ಧತೆಗಳು ಒಂದು ವಾರದ ಮೊದಲೇ ಪ್ರಾರಂಭವಾಗುತ್ತವೆ. ಮನೆಯ ಸಂಪೂರ್ಣವಾಗಿ ಶುಚಿಗೊಳಿಸಲಾಗುತ್ತದೆ. ಕುಟುಂಬದ ಪ್ರತಿಯೊಬ್ಬರಿಗೂ ಹೊಸ ಬಟ್ಟೆಗಳನ್ನು ಖರೀದಿಸಲಾಗುತ್ತದೆ. ಹಬ್ಬದ ದಿನದಂದು ಮನೆಯ ಹೆಂಗಸರು ಮನೆಯ ಬಾಗಿಲಲ್ಲಿ ವರ್ಣಮಯ 'ರಂಗೋಲಿ' ಹಾಕುತ್ತಾರೆ. ಹೊಸ ವರ್ಷವನ್ನು ಸ್ವಾಗತಿಸಲು ತಾಜಾ ಮಾವಿನ ಹಾಗೂ ಬೇವಿನ ಎಲೆಗಳಿಂದ ಮಾಡಿದ ತೋರಣ ಬಾಗಿಲಿಗೆ ಕಟ್ಟಲಾಗುತ್ತದೆ.

**ಯುಗಾದಿಯಂದು ಎಣ್ಣೆ ಸ್ನಾನ :** ಯುಗಾದಿ ಹಬ್ಬದಲ್ಲಿ ಎಣ್ಣೆ ಸ್ನಾನ ಮತ್ತೊಂದು ವಿಶೇಷ, ಮನೆ ಮಂದಿಯೆಲ್ಲ ಸ್ನಾನ ಮಾಡಿದ ನಂತರ ಮತ್ತು ಏನನ್ನಾದರೂ ತಿನ್ನುವ ಮೊದಲು, ಕರಗಿದ ತುಪ್ಪ ತುಂಬಿದ ಬಟ್ಟಲಿನಲ್ಲಿ ಒಬ್ಬರು ಮತ್ತೊಬ್ಬರ ಪ್ರತಿಬಿಂಬವನ್ನು ನೋಡುವುದು ಶುಭವೆಂದು ಪರಿಗಣಿಸಲಾಗುತ್ತದೆ. ಮನೆಯ ಹಿರಿಯ ಮಹಿಳೆಯರು, ನಂತರ ಕುಟುಂಬದ ಎಲ್ಲ ಸದಸ್ಯರ ಹಣೆಯ ಮೇಲೆ 'ಕುಂಕುಮ' ಹಚ್ಚಿ. ಭಗವಂತನ ವಿಗ್ರಹಕ್ಕೆ ತಾಜಾ ಬಟ್ಟೆ ಮತ್ತು ಬಿಳಿ ಮಲ್ಲಿಗೆ ಹೂಗಳಿಂದ ಮಾಡಿದ ಹಾರವನ್ನು ಅಲಂಕರಿಸಿ, ಇಡೀ ಕುಟುಂಬವು ಒಟ್ಟಾಗಿ ಪ್ರಾರ್ಥನೆಸಲ್ಲಿಸುತ್ತಾರೆ.





**ಪಂಚಾಂಗ ಶ್ರವಣ :** ಪ್ರಾರ್ಥನೆ ಮುಗಿದ ನಂತರ ಪಂಚಾಂಗ ಪೂಜೆ ಓದುವುದು ವಾಡಿಕೆ. ಪಂಚಾಂಗ ಪೂಜೆಯ ನಂತರ ಮನೆಯ ಹಿರಿಯರು ಮನೆಯ ಪ್ರತಿಯೊಬ್ಬರೂ ಕೇಳುವಂತೆ ಪಂಚಾಂಗ ಓದುತ್ತಾರೆ. ಈ ಶುಭ ದಿನದಂದು ವಿಶೇಷ ಸಾಂಪ್ರದಾಯಿಕ ಭಕ್ಷ್ಯಗಳನ್ನು ಭಗವಂತನಿಗೆ ನೈವೇದ್ಯಕ್ಕಾಗಿ ತಯಾರಿಸಲಾಗುತ್ತದೆ. ಪುಳಿಯೋಗರೆ, ಒಬ್ಬಟ್ಟು, ಸಿಹಿ ಪೊಂಗಲ್, ಮಾವು ಪಚಡಿ, ಹೆಸರುಕಾಳು ಪಾಯಸ ಕೋಸಂಬರಿ, ವಡಾ ಇತ್ಯಾದಿ ತಿಂಡಿಗಳನ್ನ ಮಾಡಲಾಗುತ್ತದೆ. ಹೀಗೆ ಹಬ್ಬಕ್ಕೆಂದು ಮಾಡಿದ ಅಡುಗೆಯನ್ನ ಮೊದಲು ಭಗವಂತನಿಗೆ ನೈವೇದ್ಯ ಮಾಡಿ, ನಂತರ ಎಲ್ಲರಿಗೂ 'ಪ್ರಸಾದ' ವಿತರಿಸಲಾಗುತ್ತದೆ. ಹಬ್ಬದ ದಿನ ಸಂಜೆ ಭಗವಂತನ ಆಶೀರ್ವಾದ ಪಡೆಯಲು ಭಕ್ತರು ದೇವಾಲಯಕ್ಕೆ ಭೇಟಿ ನೀಡುತ್ತಾರೆ. ದೇವಾಲಯದಲ್ಲಿ ಅರ್ಚಕರು ಎಲ್ಲರಿಗೂ ಹೊಸ ವರ್ಷದ ಪಂಚಾಂಗವನ್ನು ಓದಿ ಹೇಳುತ್ತಾರೆ. ಈ ಸಂಪ್ರದಾಯವನ್ನು 'ಪಂಚಾಗ ಶ್ರವಣ' ಎಂದು ಕರೆಯಲಾಗುತ್ತದೆ.

**ಸಿಹಿ ಕಹಿಗಳ ಸಂಮಿಶ್ರಣ :** ಯುಗಾದಿ ಹಬ್ಬದಂದು ಇನ್ನೊಂದು ವಿಶೇಷ ಆಚರಣೆ ಎಂದರೆ ಬೇವು – ಬೆಲ್ಲ ಹಂಚುವುದು, ಇದು ಜೀವನದ ಏಳು ಬೀಳುಗಳನ್ನ ಸೂಚಿಸುತ್ತದೆ. ಇದರಲ್ಲಿನ ಬೆಲ್ಲ ಬಾಳಿನ ಸಂತೋಷದ ಕ್ಷಣಗಳ ಸಂಕೇತವಾದರೆ, ಹುಳಿ ಬದುಕಿನ ಸವಾಲುಗಳನ್ನ, ಮಾವು ಆಶ್ಚರ್ಯದ ಕ್ಷಣಗಳನ್ನ, ಬೇವು ಕಹಿ ಕ್ಷಣಗಳ ಸಂಕೇತವಾಗಿದೆ. ವಿಶೇಷವಾದ ಬೇವು –ಬೆಲ್ಲ ಮಿಶ್ರಣವನ್ನು ಮೊದಲು ಭಗವಂತನಿಗೆ ಅರ್ಪಿಸಿ, ನಂತರ ಕುಟುಂಬದ ಸದಸ್ಯರಿಗೆ ಮತ್ತು ಮನೆಗೆ ಬರುವ ಅತಿಥಿಗಳಿಗೂ ನೀಡಲಾಗುತ್ತದೆ.

**ಖಣಿ ಇಡುವುದು :** ಕರಾವಳಿಯ ಸೌರಮಾನ ಯುಗಾದಿಯ ವಿಶೇಷತೆ ಖಣಿ ಇಡುವುದು. ಬಾಳೆ ಎಲೆ, ತಟ್ಟೆಯಲಿ ಅಕ್ಕಿ ಹಾಕಿ ಅದರ ಮೇಲೆ ತೆಂಗಿನಕಾಯಿ, ಸೌತೇಕಾಯಿ, ರವಿಕೆ ಕಣ, ಹೊಸ ಬಟ್ಟೆ, ಚಿನ್ನ, ಬತ್ತದ ತೆನೆ, ಹಣ್ಣು, ದೇವರ ಪ್ರತಿಮೆ ಅದರ ಮುಂದೆ ಒಂದು ಕನ್ನಡಿ ಇತ್ತು, ಆ ಕನ್ನಡಿಯಲಿ ದೇವರ ಪ್ರತಿಮೆ ಹಾಗೂ ತಟ್ಟೆಯಲಿ ಇಟ್ಟಂತಹ ವಸ್ತುಗಳನ್ನು ಕಾಣುವ ಹಾಗೆ ಇಡುತ್ತಾರೆ. ಯುಗಾದಿ ಹಬ್ಬದಂದು ಬೆಳಿಗ್ಗೆ ಬೇಗ ಎದ್ದು ದೇವರ ದೀಪ ಹಚ್ಚಿ ಖಣಿಯಲ್ಲಿನ ಕನ್ನಡಿಯಲಿ ದೇವ ದರ್ಶನ ಪಡೆಯುವುದು ಅಂದಿನ ವಿಶೇಷ. ನಂತರ ಸ್ನಾನ, ಹೋಳಿಗೆ ಚಿತ್ರಾನ್ನದೂಟ.

ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಹಾಗೂ ಮಹಾರಾಷ್ಟಗಳಲ್ಲಿ ಯುಗಾದಿ ಹಬ್ಬವನ್ನು ಅತ್ಯಂತ ವಿಶೇಷವಾಗಿ ವಿಜ್ರಂಬಣೆಯಿಂದ ಆಚರಿಸಲಾಗುತ್ತದೆ. ಯುಗಾದಿ ಹಬ್ಬ ಆಚರಣೆ ಪ್ರಯುಕ್ತ ಯುವಕರು, ಹಿರಿಯರು, ಮಹಿಳೆಯರಿಗೆ ಹಾಗೂ ಮಕ್ಕಳ ಮನರಂಜನೆಗಾಗಿ ಆಯಾ ಊರುಗಳ ಸಂಪ್ರದಾಯದಂತೆ ವಿಶೇಷ ಕ್ರೀಡಾಕೂಟ ನಡೆಸಿ ಗೆದ್ದವರಿಗೆ ಬಹುಮಾನ ವಿತರಿಸಲಾಗುತ್ತದೆ.

ಕುಟುಂಬದಲ್ಲಿ ಪ್ರೀತಿ ಸೌಹಾರ್ದತೆ ಸಂಬಂಧಗಳನ್ನು ಬೆಸೆಯುವುದು ಹಿರಿಯರಿಗೆ ಗೌರವ ಸಲ್ಲಿಸುವುದು ಮಕ್ಕಳಿಗೆ ಕುಟುಂಬ ಮತ್ತು ಸಾಮಾಜಿಕ ಸಂಬಂಧಗಳ ಮಹತ್ವದ ಅರಿವು ಮೂಡಿಸುವುದು ಹಾಗೂ ನೆರೆಹೊರೆಯವರನ್ನು ಪ್ರೀತಿಸುವ ಜೊತೆಗೆ ವಸುದೈವ ಕುಟುಂಬದ ಸಂದೇಶಸಾರುವುದೆ ಯುಗಾದಿ ಹಬ್ಬದ ಮಹತ್ವವಾಗಿದೆ.

**– ಸವಿತಾ ನಾಯ್ಕ್, ಬೆಂಗಳೂರು**



# ಧಾರವಾಡದಲ್ಲಿ ಶಿಕ್ಷಣ, ತರಬೇತಿ ಕಾರ್ಯಕ್ರಮ




**ಧಾರವಾಡ :** ದಿನಾಂಕ : 23.02.2023ರಂದು ಪತ್ತಿನ ಮಹಾಮಂಡಳವು ಧಾರವಾಡ, ಗದಗ, ಉತ್ತರಕನ್ನಡ ಜಿಲ್ಲೆ, ಹಾವೇರಿ ಜಿಲ್ಲೆಯ ವ್ಯಾಪ್ತಿಗೊಳಪಡುವ ಪತ್ತಿನ ಸಹಕಾರ ಸಂಘಗಳ ಆಡಳಿತಮಂಡಳಿ ನಿರ್ದೇಶಕರು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಒಂದು ದಿನದ ಶೈಕ್ಷಣಿಕ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಶೈಕ್ಷಣಿಕ ಕಾರ್ಯಾಗಾರದ ಉದ್ಘಾಟನೆಯನ್ನು ಪತ್ತಿನ ಮಹಾಮಂಡಳದ ನಿರ್ದೇಶಕರುಗಳಾದ ಡಾ॥ಸಂಜಯ ಪಿ ಹೊಸಮಠ, ಶ್ರೀ ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ, ಶ್ರೀ ಉಮೇಶ್ ಶಿ ಬಾಳಿ, ಶ್ರೀ ಧರೇಪ್ಪ ಮಹದೇವ ಆಲಗೂರ, ಶ್ರೀ ಹೆಚ್.ಟಿ.ನಾಗೇಶ್‌ರವರುಗಳು ಮತ್ತು ಮಾಜಿ ನಿರ್ದೇಶಕರಾದ ಶ್ರೀ ಗುರುರಾಜ ಹುಣಸಿಮರದರವರು ಪತ್ತಿನ ಮಹಾಮಂಡಳದ ಪ್ರಭಾರ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಆಶಾಲತಾ.ಪಿ. ರವರು ಜಂಟಿಯಾಗಿ ಉದ್ಘಾಟಿಸಿದರು.

ಶ್ರೀ ಪಂಪಾಪತಿ ದೇಸಾಯಿ, ಆದಾಯ ತೆರಿಗೆ ಅಧಿಕಾರಿಗಳು, ಬೆಳಗಾವಿ ಇವರು ದೇಶದ ಅಭಿವೃದ್ಧಿಗಾಗಿ ತೆರಿಗೆಯೇ ಮೂಲ ಎಂಬ ವಿಚಾರದೊಂದಿಗೆ ಪ್ರಾರಂಭಿಸಿ 80ಪಿ ಅಡಿಯಲ್ಲಿ ತೆರಿಗೆ ವಿನಾಯತಿ, 269ಎಸ್‌ಟಿ, 269 ಎಸ್‌ಎಸ್, 269 ಟಿ ಗಳ ಬಗ್ಗೆ "ಪತ್ತಿನ ಸಹಕಾರ ಸಂಘಗಳಲ್ಲಿ ಆದಾಯ ತೆರಿಗೆಯ ಪಾತ್ರ ಹಾಗೂ ಅದರ ನಿರ್ವಹಣೆ ಬಗ್ಗೆ ಉಪನ್ಯಾಸ ನೀಡಿದರು.

ಶ್ರೀಮತಿ ವಸಂತಗೀತಾ ಹಿರೇಮಠ, ಉಪನ್ಯಾಸಕರು, ಕೆ.ಐ.ಸಿ.ಎಂ. ಬೆಳಗಾವಿ ರವರು ಸಹಕಾರ ಸಂಘಗಳಲ್ಲಿ ಆಡಳಿತಮಂಡಳಿ ಮತ್ತು ಸಿಬ್ಬಂದಿಯ ಕುರಿತು, ಸಹಕಾರ ಸಂಘಕ್ಕೆ ಬರುವ ಗ್ರಾಹಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಹಕಾರ ಸಂಘದ ಸಂಪೂರ್ಣ ಮಾಹಿತಿ ನೀಡಿ ವ್ಯವಹಾರ ನಡೆಸುವ ಬಗ್ಗೆ "How to be a good Banker" ಕುರಿತಂತೆ, ಶ್ರೀ ಶಂಕರ ಕರಬಸನ್ನವರ, ಸಹಕಾರ ಅಭಿವೃದ್ಧಿ ಅಧಿಕಾರಿಗಳು, ಬೆಳಗಾವಿ ಮತ್ತು ರಾಯಭಾಗ ತಾಲ್ಲೂಕು ಇವರಿಂದ "ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ಇತ್ತೀಚಿನ ತಿದ್ದುಪಡಿಗಳು" ಕುರಿತಂತೆ ಮತ್ತು ಡಾ. ಕನಕಪ್ಪ ಪೂಜಾರ, ಸಹಾಯಕ ಪ್ರಾಧ್ಯಾಪಕರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರು ಆಡಳಿತಮಂಡಳಿ ಮತ್ತು ಸಿಬ್ಬಂದಿಯವರು ಒಟ್ಟುಗೂಡಿ ಕೆಲಸ ಮಾಡಿದರೆ ಸಂಘದ ಅಭಿವೃದ್ಧಿ ನಿಶ್ಚಿತ ಎಂಬುದರ ಬಗ್ಗೆ ಸಾಕ್ಷ್ಯ ಚಿತ್ರದ ಮೂಲಕ ಒಟ್ಟಾರೆಯಾಗಿ ಕಾರ್ಯನಿರ್ವಹಿಸುವುದರ ಬಗ್ಗೆ ತಿಳಿಸಿ "Personality Development and Communication skills" ಬಗ್ಗೆ ಶಿಬಿರಾರ್ಥಿಗಳಿಗೆ ಉಪನ್ಯಾಸ ನೀಡಿದರು. ಈ ಶಿಬಿರದಲ್ಲಿ ಸುಮಾರು 170ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿ ಅದರ ಪ್ರಯೋಜನ ಪಡೆದರು. ಜಿಲ್ಲಾ ಯೂನಿಯನ್‌ಗಳ ಅಧಿಕಾರಿಗಳಾದ ಚಂದ್ರಶೇಖರ ಕರಿಯಪ್ಪನವರ, ಶರಣಬಸಪ್ಪ ಕಾಟ್ರಳ್ಳಿ, ಎಸ್.ವಿ. ಹಿರೇಮಠ, ಯಶವಂತಕುಮಾರ್ ಹೆಚ್. ಅವರುಗಳು ಉಪಸ್ಥಿತರಿದ್ದರು.





### ಜನಪರ, ರೈತ ಸ್ನೇಹಿ ಬಜೆಟ್; ಸ್ವಾಗತಾರ್ಹ, ಸಮಾಧಾನಕರ

# ರೈತರಿಗೆ ಬಡ್ಡಿರಹಿತ ಸಾಲ ರೂ. 5 ಲಕ್ಷಕ್ಕೆ ಏರಿಕೆ - "ಭೂಸಿರಿ" ನೂತನ ಯೋಜನೆ

### ಮಹಿಳೆಯರಿಗೆ ಉಚಿತ ಬಸ್‌ಪಾಸ್, ನೇಕಾರರಿಗೆ, ಮೀನುಗಾರರಿಗೆ ನೆರವುಶಿಕ್ಷಣ, ಆರೋಗ್ಯ, ಗ್ರಾಮೀಣ ಅಭಿವೃದ್ಧಿಗೆ ಆದ್ಯತೆ

**ಬೆಂಗಳೂರು : ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಫೆಬ್ರವರಿ 17 ರಂದು ವಿಧಾನ ಮಂಡಳದಲ್ಲಿ ಮಂಡಿಸಿದ 2023–24ರ ಸಾಲಿನ 309182 ಕೋಟಿ ರೂ. ಗಾತ್ರದ ಬಜೆಟ್ ಜನತೆಗೆ ಸಮಾಧಾನವನ್ನು ತಂದುಕೊಟ್ಟಿದೆ. ರೈತರ, ಸಾಮಾನ್ಯ ಜನರ ಹಿತಕಾಪಾಡಲು ಆದ್ಯತೆ ನೀಡಿರುವುದು ಕಂಡುಬರುತ್ತದೆ. ಶಿಕ್ಷಣ, ಆರೋಗ್ಯ, ಗ್ರಾಮೀಣ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಸಹಕಾರ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಿರುವುದು ಬಜೆಟ್ ಮುಖ್ಯಾಂಶವಾಗಿದೆ.**

**ಬಜೆಟ್ ಗಾತ್ರ ಮೊದಲ ಬಾರಿಗೆ 3 ಲಕ್ಷ ಕೋಟಿ ರೂ. ದಾಟಿದೆ. ರಾಷ್ಟ್ರದ 3–4 ರಾಜ್ಯಗಳಲ್ಲಿ ದೊಡ್ಡ ಮೊತ್ತದ ಬಜೆಟ್ ಮಂಡನೆಯಾಗುತ್ತಿರುವ ಪರಿಸ್ಥಿತಿಯಲ್ಲಿ ಕರ್ನಾಟಕವು ಅದೇ ಸಾಲಿಗೆ ಸೇರಿದೆ. ಈ ವರ್ಷ 30 ಲಕ್ಷಕ್ಕಿಂತ ಹೆಚ್ಚಿನ ರೈತರಿಗೆ ರೂ. 25,000 ಕೋಟಿಗಳಷ್ಟು ಸಾಲ ವಿತರಿಸಲಾಗುವುದು ಎಂದು ಬಸವರಾಜ ಬೊಮ್ಮಾಯಿ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ.**

**ಕೃಷಿ ವಲಯದ ಪ್ರಮುಖಾಂಶಗಳು...**

- ಕಿಸಾನ್ ಕ್ರೆಡಿಟ್ ಕಾರ್ಡ್ ಹೊಂದಿರುವ ರೈತರಿಗೆ ಭೂಸಿರಿ ಎಂಬ ನೂತನ ಯೋಜನೆಯಡಿ 2023–24ನೇ ಸಾಲಿನಿಂದ ರೂ. 10 ಸಾವಿರಗಳ ಹೆಚ್ಚುವರಿ ಸಹಾಯ ಧನ ನೀಡಲಾಗುವುದು. ಈ ಯೋಜನೆಯಡಿ ರಾಜ್ಯದ 50 ಲಕ್ಷ ರೈತರಿಗೆ ಅನುಕೂಲವಾಗಲಿದೆ.
- ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಕೀಟನಾಶಕ ಮುಂತಾದ ಪರಿಕರಗಳಿಗೆ ರೂ. 962 ಕೋಟಿ ವೆಚ್ಚ ಮಾಡಲಾಗಿದೆ.
- ನೀರಾವರಿ ಪಂಪ್‌ಸೆಟ್‌ಗಳಿಗೆ ರೂ. 52,590 ಕೋಟಿ ವಿದ್ಯುತ್ ಸಹಾಯ ಧನ ನೀಡಲಾಗಿದೆ.
- ಫಸಲ್ ಬಿಮಾ ಯೋಜನೆಯಡಿ 86 ಲಕ್ಷ ರೈತರ ಬೆಳೆ ವಿಮೆಗಾಗಿ ರೂ. 4,900 ಕೋಟಿ ಪ್ರೀಮಿಯಂ ಪಾವತಿಸಲಾಗಿದೆ.
- ಶಾಲಾ–ಕಾಲೇಜುಗಳ ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪಾಸ್
- ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಭತ್ತ, ರಾಗಿ, ಜೋಳ, ಹೆಸರು ಕಾಳು ಮತ್ತು ತೊಗರಿ ಮುಂತಾದ ಆಹಾರ ಧಾನ್ಯಗಳ ಖರೀದಿಗಾಗಿ ರೂ. 6,650 ಕೋಟಿ ಒದಗಿಸಲಾಗಿದೆ.
- ರಾಜ್ಯದ 56 ಲಕ್ಷ ಸಣ್ಣ ಮತ್ತು ಅತಿ ಸಣ್ಣ ರೈತರ ಕುಟುಂಬಗಳಿಗೆ ರೂ. 180 ಕೋಟಿ ವೆಚ್ಚದಲ್ಲಿ ಜೀವನ್ ಜ್ಯೋತಿ ವಿಮಾ ಯೋಜನೆಯಡಿ ಭದ್ರತೆ ನೀಡಲಾಗುವುದು.
- ಕಳೆದ ವರ್ಷ ಘೋಷಿಸಿದ ಡೀಸೆಲ್ ಸಬ್ಸಿಡಿ ನೀಡುವ ರೈತ ಶಕ್ತಿ ಯೋಜನೆಗೆ ರೂ. 400 ಕೋಟಿ ಅನುದಾನ
- ಕೃಷಿ ಯಾಂತ್ರೀಕರಣವನ್ನು ಉತ್ತೇಜಿಸಲು ರೂ. 2,037 ಕೋಟಿ
- ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ರೈತರ ಉತ್ಪಾದಕ ಸಂಸ್ಥೆಗಳನ್ನು ಪ್ರೋತ್ಸಾಹಿಸಲು 10 ಲಕ್ಷ ರೂ.ವರೆಗಿನ ಬಂಡವಾಳಕ್ಕೆ 5 ವರ್ಷಗಳ ಅವಧಿಗೆ ಬ್ಯಾಂಕುಗಳ ಮೂಲಕ ಮುಖ್ಯಮಂತ್ರಿ ರೈತ ಉನ್ನತಿ ಯೋಜನೆಯಡಿ ಬಡ್ಡಿ ಸಹಾಯಧನ ಒದಗಿಸಲಾಗುವುದು.
- ರೈತ ಸಿರಿ ಯೋಜನೆಯಡಿ ಕಿರುಧಾನ್ಯ ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ 10 ಸಾವಿರ ರೂ. ಪ್ರೋತ್ಸಾಹಧನ ನೀಡಲಾಗುವುದು.
- ಕೇಂದ್ರ ಸರ್ಕಾರದ ನೆರವಿನೊಂದಿಗೆ ಮುಂದಿನ 4 ವರ್ಷಗಳಲ್ಲಿ ಒಂದು ಲಕ್ಷ ಹೆಕ್ಟೇರ್ ಪ್ರದೇಶವನ್ನು ನೈಸರ್ಗಿಕ ಮತ್ತು ಸಮಗ್ರ ಕೃಷಿಗೆ ಒಳಪಡಿಸಲಾಗುವುದು.
- ರೈತ ಜಮೀನುಗಳಿಗೆ ಜಲ ಹೊಂಡ ನಿರ್ಮಿಸಿ ನೀರು ಸಂರಕ್ಷಣಾ ಕಾಮಗಾರಿಗಳಿಂದ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಜಲನಿಧಿ ಎಂಬ ಹೊಸ ಯೋಜನೆ ಪ್ರಾರಂಭಿಸಲಾಗುವುದು.
- ಕೊಯ್ಲೋತ್ತರ ತಂತ್ರಜ್ಞಾನಕ್ಕೆ ಒತ್ತು ಕೊಟ್ಟು ತೋಟಗಾರಿಕೆ ಬೆಳೆಗಳ ಮೌಲ್ಯವರ್ಧನೆಯ ಮೂಲಕ ರೈತರಿಗೆ ಉತ್ತಮ ಆದಾಯ ಪಡೆಯಲು ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ರಫ್ತು ಮತ್ತು ಸಂಸ್ಕರಣೆಯ ಉತ್ತೇಜನಕ್ಕೆ ರೈತ ಸಂಪದ ಯೋಜನೆಯಡಿ ಕೆಫೆಕ್ ಸಂಸ್ಥೆಯ ಮೂಲಕ 100 ಕೋಟಿ ರೂ. ಯೋಜನೆ ರೂಪಿಸಲಾಗುವುದು.
- ಅಡಕೆ ಬೆಳೆಯನ್ನು ಬಾಧಿಸುವ ರೋಗಗಳ ನಿರ್ವಹಣೆಗೆ ನೂತನ

ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವ ಜೊತೆಗೆ ಉತ್ಪಾದಕತೆ ಹೆಚ್ಚಿಸುವ ಅಗತ್ಯತೆಯನ್ನು ಮನಗಂಡು ತೀರ್ಥಹಳ್ಳಿಯ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರಕ್ಕೆ 10 ಕೋಟಿ ರೂ.ಗಳ ನೆರವು ನೀಡಲಾಗುವುದು.

- ತುಮಕೂರು ಜಿಲ್ಲೆ ತಿಪಟೂರಿನಲ್ಲಿ ತೋಟಗಾರಿಕಾ ಮಹಾ ವಿದ್ಯಾಲಯವನ್ನು ಸ್ಥಾಪಿಸಲಾಗುವುದು.
- ಏಷ್ಯಾದಲ್ಲಿಯೇ ಅತಿ ದೊಡ್ಡ ರೇಷ್ಮೆ ಮಾರುಕಟ್ಟೆ ಹೊಂದಿರುವ ಶಿಡ್ಲಘಟ್ಟದಲ್ಲಿ ನಬಾರ್ಡ್ ಯೋಜನೆಯಡಿ 75 ಕೋಟಿ ರೂ.ಗಳ ವೆಚ್ಚದಲ್ಲಿ ಹೈಟೆಕ್ ರೇಷ್ಮೆಗೂಡು ಮಾರುಕಟ್ಟೆ ನಿರ್ಮಿಸಲಾಗುವುದು.
- ಚರ್ಮಗಂಟು ರೋಗವನ್ನು ತಡೆಗಟ್ಟಲು ಒಂದು ಕೋಟಿಗೂ ಜಾನುವಾರುಗಳಿಗೆ ಲಸಿಕೆ ನೀಡಲಾಗಿದೆ. ಈ ಸೋಂಕಿನಿಂದ ಮರಣ ಹೊಂದಿದ ರಾಸುಗಳ ಮಾಲೀಕರಿಗೆ 50 ಕೋಟಿ ರೂ.ಗಳ ಪರಿಹಾರ ನೀಡಲಾಗಿದೆ.
- ರಾಜ್ಯದ 9 ಲಕ್ಷ ಹಾಲು ಉತ್ಪಾದಕರಿಗೆ 1067 ಕೋಟಿ ರೂ. ಪ್ರೋತ್ಸಾಹಧನವನ್ನು ನೇರ ನಗದು ಪಾವತಿ ಮೂಲಕ ವರ್ಗಾವಣೆ ಮಾಡಲಾಗಿದೆ.
- ಹಾವೇರಿಯಲ್ಲಿ 1 ಲಕ್ಷ ಲೀಟರ್ ಸಾಮರ್ಥ್ಯದ ಮೆಗಾಡೈರಿ ಸ್ಥಾಪನೆಗೆ ಸರ್ಕಾರದಿಂದ 90 ಕೋಟಿ ರೂ. ಅನುದಾನ ನೀಡಲಾಗಿದೆ. ಪ್ರಸಕ್ತ ವರ್ಷ ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಾಲು ಉತ್ಪಾದನೆ ಹೆಚ್ಚಿಸಲು ಬಳ್ಳಾರಿ ಜಿಲ್ಲೆಯಲ್ಲಿ ದಿನಂಪ್ರತಿ 2 ಲಕ್ಷ ಲೀಟರ್ ಹಾಲು ಸಂಸ್ಕರಣ ಸಾಮರ್ಥ್ಯದ ಮೆಗಾ ಡೈರಿಯನ್ನು 100 ಕೋಟಿ ರೂ.

ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದನ್ನು ಉತ್ತೇಜಿಸಲು ಸರ್ಕಾರ ಒತ್ತು ನೀಡಿದೆ. ಸ್ವಸಹಾಯ ಗುಂಪುಗಳಿಗೆ ಪ್ರಮಾಣಿತ ಉತ್ಪನ್ನಗಳನ್ನು ತಯಾರಿಸಲು ನೆರವಾಗುವ ಸ್ತ್ರೀ ಸಾಮರ್ಥ್ಯ ಯೋಜನೆಯಡಿ 50 ಸಾವಿರ ಸ್ವಸಹಾಯ ಗುಂಪುಗಳಿಗೆ ತಲಾ ಒಂದು ಲಕ್ಷ ರೂ.ನಂತೆ ಒಟ್ಟು 500 ಕೋಟಿ ರೂ.ಗಳ ಸಮುದಾಯ ಬಂಡವಾಳ ನಿಧಿ ನೀಡಲು ಕ್ರಮ ವಹಿಸಲಾಗುತ್ತಿದೆ. ವಿವಿಧ ಸ್ವಯಂ ಉದ್ಯೋಗ ಯೋಜನೆಗಳಡಿ 7,239 ಸ್ವಸಹಾಯ ಸಂಘಗಳಿಗೆ 108 ಕೋಟಿ ರೂ.. ಸಮುದಾಯ ಬಂಡವಾಳ ನಿಧಿ ಹಾಗೂ 5.68 ಲಕ್ಷ ಸ್ವಸಹಾಯ ಗುಂಪುಗಳಿಗೆ ಬ್ಯಾಂಕ್ ಸಂಪರ್ಕದಡಿ 11,391 ಕೋಟಿ ರೂ. ಸಾಲವನ್ನು ಒದಗಿಸಲಾಗಿದೆ. ವೈಯಕ್ತಿಕ ಮತ್ತು ಗುಂಪುಗಳನ್ನೊಳಗೊಂಡ 9,688 ಫಲಾನುಭವಿಗಳಿಗೆ ಕಿರು ಉದ್ದಿಮೆ ಪ್ರಾರಂಭಿಸಲು ಬ್ಯಾಂಕ್ ಮೂಲಕ ಸಾಲ ಸೌಲಭ್ಯವನ್ನು ಒದಗಿಸಲಾಗಿದೆ.

ಇದಲ್ಲದೇ, ಸಹಕಾರ ವಲಯದಲ್ಲಿ ಕಳೆದ ವರ್ಷದಲ್ಲಿ 40,000 ಮಹಿಳಾ ಸ್ವಸಹಾಯ ಗುಂಪುಗಳಿಗೆ 1,600 ಕೋಟಿ ರೂ.ಗಳಷ್ಟು ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಿತರಿಸಲಾಗಿದೆ. ಇದಕ್ಕಾಗಿ ಸರ್ಕಾರದಿಂದ 96 ಕೋಟಿ ರೂ. ಬಡ್ಡಿ ಸಹಾಯಧನ ನೀಡಲಾಗಿದೆ. ಪ್ರಸಕ್ತ ಸಾಲಿನಲ್ಲಿ 45,000 ಮಹಿಳಾ ಸ್ವಸಹಾಯ ಗುಂಪುಗಳಿಗೆ 1,800 ಕೋಟಿ ರೂ.ಗಳಷ್ಟು ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಿತರಿಸುವ ಗುರಿ ಹೊಂದಲಾಗಿದೆ.

## ರೈತರ ಕಲ್ಯಾಣಕ್ಕೆ ಒತ್ತು ನೀಡಿರುವ ಬಜೆಟ್ : ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅಭಿಮತ




ಸನ್ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅವರು ಮಂಡಿಸಿರುವ ಬಜೆಟ್ ರೈತರ ಆರ್ಥಿಕ ಅಭಿವೃದ್ಧಿಗೆ ಒತ್ತು ನೀಡಿದೆ. ಎಲ್ಲಾ ವರ್ಗದ ಜನತೆಯ ಹಿತ ಕಾಯುವ ಜನಪರ ಬಜೆಟ್ ಇದಾಗಿದೆ. ರೈತರಿಗೆ ನೀಡುವ ಬಡ್ಡಿ ರಹಿತ ಅಲ್ಪಾವಧಿ ಸಾಲದ ಮಿತಿಯನ್ನು 3 ಲಕ್ಷ ರೂ.ಗಳಿಂದ 5 ಲಕ್ಷ ರೂ.ಗಳಿಗೆ ಹೆಚ್ಚಿಸುವ ಮೂಲಕ ರೈತರ ಕಲ್ಯಾಣಕ್ಕೆ ಒತ್ತು ನೀಡಲಾಗಿದೆ. 30 ಲಕ್ಷಕ್ಕಿಂತ ಹೆಚ್ಚಿನ ರೈತರಿಗೆ 25 ಸಾವಿರ ಕೋಟಿ ರೂ.ಗಳಷ್ಟು ಸಾಲ ವಿತರಿಸಲಾಗುವುದು. ಇದರಿಂದ ರೈತರಿಗೆ ಕೃಷಿ ಚಟುವಟಿಕೆಗಳಿಗೆ ರೈತರಿಗೆ ಸುಲಭವಾಗಿ ಸಾಲ ಸೌಲಭ್ಯ ಸಿಗಲಿದೆ.

ಕಿಸಾನ್ ಕ್ರೆಡಿಟ್ ಕಾರ್ಡ್ ಹೊಂದಿರುವ ರೈತರಿಗೆ 'ಭೂಸಿರಿ' ಎಂಬ ನೂತನ ಯೋಜನೆಯಡಿ 10 ಸಾವಿರ ರೂ.ಗಳ ಹೆಚ್ಚುವರಿ ಸಹಾಯಧನ ನೀಡಲು ನಿರ್ಧರಿಸಲಾಗಿದೆ. ಈ ಮೊತ್ತದಲ್ಲಿ ರಾಜ್ಯ ಸರ್ಕಾರದ 2500 ರೂ. ಹಾಗೂ ನಬಾರ್ಡ್ ನ 7500 ರೂ. ಸೇರಿದ್ದು, ರಾಜ್ಯದ ಸುಮಾರು 50 ಲಕ್ಷ ರೈತರಿಗೆ ಅನುಕೂಲವಾಗಲಿದೆ. 45 ಸಾವಿರ ಮಹಿಳಾ ಸ್ವಸಹಾಯ ಗುಂಪುಗಳಿಗೆ 1800 ಕೋಟಿ ರೂ.ಗಳಷ್ಟು ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಿತರಿಸುವ ಗುರಿ ಹೊಂದುವ ಮೂಲಕ ಮಹಿಳೆಯರು ಆರ್ಥಿಕವಾಗಿ ಸದೃಢರಾಗಲು ಒತ್ತು ನೀಡಲಾಗಿದೆ. ಹಾವೇರಿಯಲ್ಲಿ 1 ಲಕ್ಷ ಲೀಟರ್ ಸಾಮರ್ಥ್ಯದ ಮೆಗಾ ಡೈರಿ ಸ್ಥಾಪನೆಗೆ 90 ಕೋಟಿ ರೂ. ಅನುದಾನ ನೀಡುವುದರ ಜೊತೆಗೆ ಬಳ್ಳಾರಿ ಜಿಲ್ಲೆಯಲ್ಲಿ ನಿತ್ಯ 2 ಲಕ್ಷ ಲೀಟರ್ ಹಾಲು ಸಂಸ್ಕರಣಾ ಸಾಮರ್ಥ್ಯದ ಮೆಗಾ ಡೈರಿಯನ್ನು 100 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸುವ ಮೂಲಕ ಹೈನುಗಾರಿಕೆಗೆ ಪ್ರೋತ್ಸಾಹ ನೀಡಲಾಗಿದೆ. ರೈತರು, ಮಹಿಳೆಯರು ಮತ್ತು ಎಲ್ಲಾ ವರ್ಗದ ಜನರ ಹಿತ ಕಾಯುವ ಬಜೆಟ್ ಇದಾಗಿದೆ. ದೂರದೃಷ್ಟಿಯ, ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕವಾದ ಬಜೆಟ್ ಇದಾಗಿದೆ.

ವೆಚ್ಚದಲ್ಲಿ ಸ್ಥಾಪಿಸಲಾಗುವುದು.

**ರೈತರಿಗೆ ರೂ. 5 ಲಕ್ಷ ಬಡ್ಡಿ ರಹಿತ ಸಾಲ**

- ಈ ವರ್ಷದಿಂದ ರೈತರಿಗೆ ನೀಡುವ ಬಡ್ಡಿರಹಿತ ಅಲ್ಪಾವಧಿ ಸಾಲದ ಮಿತಿಯನ್ನು 3 ಲಕ್ಷ ರೂ.ಗಳಿಂದ 5 ಲಕ್ಷ ರೂ.ಗಳಿಗೆ ಹೆಚ್ಚಳ ಮಾಡಲಾಗಿದೆ. ಇದರಿಂದ 30 ಲಕ್ಷಕ್ಕಿಂತ ಹೆಚ್ಚಿನ ರೈತರಿಗೆ 25 ಸಾವಿರ ಕೋಟಿ ರೂ.ಗಳಷ್ಟು ಸಾಲ ವಿತರಿಸಲಾಗುವುದು.
- ಬೆಳೆಗಳ ಸಂಸ್ಕರಣೆ, ಶೇಖರಣೆಗಾಗಿ 10.45 ಲಕ್ಷ ಫಲಾನುಭವಿಗಳಿಗೆ ರೂ. 175 ಕೋಟಿ ನೆರವು ನೀಡಲಾಗಿದೆ.
- ತೋಟಗಾರಿಕೆ ಹಾಗೂ ರೇಷ್ಮೆ ಕೃಷಿಗೆ ಪ್ರೋತ್ಸಾಹ ನೀಡುವ ಉದ್ದೇಶಕ್ಕಾಗಿ ರೂ. 5,245 ಕೋಟಿ ವೆಚ್ಚ ಮಾಡಲಾಗಿದೆ.
- ರೈತ ವಿದ್ಯಾನಿಧಿ ಯೋಜನೆಯಡಿಯಲ್ಲಿ 10.32 ಲಕ್ಷ ವಿದ್ಯಾರ್ಥಿಗಳಿಗೆ ರೂ. 125 ಕೋಟಿ ನೀಡಲಾಗಿದೆ.
- ಕೃಷಿ ಮತ್ತು ತೋಟಗಾರಿಕೆಯಲ್ಲಿ ಹನಿ ನೀರಾವರಿಗಾಗಿ ರೂ. 2,900 ಕೋಟಿಗೆ ಮಾರುಕಟ್ಟೆ ನೆರವು ನೀಡಲಾಗಿದೆ.
- ರಾಜ್ಯದಲ್ಲಿ 19 ಕಾರ್ಮಿಕರ ವಿಮಾ ಆಸ್ಪತ್ರೆ ಆರಂಭ.
- ಬಿಪಿಎಲ್ ಕಾರ್ಡ್‌ದಾರರಿಗೆ ಮಾಸಿಕ ಅಕ್ಕಿ 5 ರಿಂದ 6 ಕೆ.ಜಿಗೆ ಹೆಚ್ಚಳ.
- ವಸತಿ ಯೋಜನೆಯಡಿ ಘಟಕ ಸಹಾಯಧನ ರೂ. 1.5 ಲಕ್ಷದಿಂದ ರೂ. 2 ಲಕ್ಷಕ್ಕೆ ಹೆಚ್ಚಳ.
- ಮುಖ್ಯಮಂತ್ರಿ ವಿದ್ಯಾಶಕ್ತಿ ಯೋಜನೆ ಆರಂಭ. ಸರ್ಕಾರಿ ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳಿಗೆ ದಾಖಲಾಗುವವರಿಗೆ ಶುಲ್ಕ ವಿನಾಯಿತಿ.
- ಕಿಸಾನ್ ಕಾರ್ಡ್ ಹೊಂದಿರುವ ರೈತರಿಗೆ ಭೂಸಿರಿ ಯೋಜನೆ. ರೈತರಿಗೆ ರೂ. 10 ಸಾವಿರ ಸಹಾಯಧನ. ತುರ್ತು ಸಂದರ್ಭದಲ್ಲಿ ರೈತರಿಗೆ ಬೀಜ, ಗೊಬ್ಬರ ಖರೀದಿಗೆ ಅನುಕೂಲ.
- ಸಣ್ಣ, ಅತಿ ಸಣ್ಣ ರೈತರಿಗಾಗಿ ರೂ. 180 ಕೋಟಿ ವೆಚ್ಚದಲ್ಲಿ ಜೀವನ್ ಜ್ಯೋತಿ ಕಿಸಾನ್ ಯೋಜನೆ ಘೋಷಣೆ.

ಆವರ್ತ ನಿಧಿಗೆ ಬಲ. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸುವ ಧಾನ್ಯಗಳಿಗೆ, ರೈತರಿಗೆ ತ್ವರಿತವಾಗಿ ಹಣ ಪಾವತಿ ಮಾಡಲು ಸ್ಥಾಪಿಸಿರುವ ಆವರ್ತ ನಿಧಿಯನ್ನು ನಮ್ಮ ಸರ್ಕಾರದ ಕಾಲಾವಧಿಯಲ್ಲಿ 2,000 ಕೋಟಿ ರೂ.ಗಳವರೆಗೆ ಹೆಚ್ಚಿಸಲಾಗುವುದೆಂದು 2020–21ನೇ ಸಾಲಿನಲ್ಲಿ ಘೋಷಿಸಲಾಗಿತ್ತು. ಪ್ರಸ್ತುತ ಆವರ್ತ ನಿಧಿ ಮತ್ತು ಕರ್ನಾಟಕ ಆಹಾರ ನಿಗಮಕ್ಕೆ ಧಾನ್ಯಗಳ ಖರೀದಿಗೆ ಬಿಡುಗಡೆ ಮಾಡಿರುವ ಅನುದಾನ ಸೇರಿ ಒಟ್ಟು 1,000 ಕೋಟಿ ರೂ.ಗಳಿದ್ದು, 2022–23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ 1,000 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಪ್ರಸಕ್ತ ಆಯವ್ಯಯದಲ್ಲಿ 1,500 ಕೋಟಿ ರೂ.ಗಳನ್ನು ಒದಗಿಸಿ, 3,500 ಕೋಟಿ ರೂ. ಗಳಿಗೆ ಏರಿಸಲಾಗುವುದು. ಕಳೆದ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ, ಯಶಸ್ವಿನಿ ಯೋಜನೆಯನ್ನು ಮರುಜಾರಿಗೊಳಿಸಿ, ಪ್ರಸ್ತುತ 32 ಲಕ್ಷ ರೈತರನ್ನು ನೋಂದಾಯಿಸಲಾಗಿದೆ. ಈಗಾಗಲೇ ರೈತರು ಈ ಯೋಜನೆಯ ಮೂಲಕ ಚಿಕಿತ್ಸೆ ಪಡೆಯುತ್ತಿದ್ದಾರೆ.

## ನೂತನ ರಾಷ್ಟ್ರೀಯ ಸಹಕಾರ ನೀತಿ ಕರಡು ಸಮಿತಿ ಸಭೆ




**ನವದೆಹಲಿ :** ರಾಷ್ಟ್ರೀಯ ಸಹಕಾರ ಯೂನಿಯನ್, ನವದೆಹಲಿ ಸಭಾಂಗಣದಲ್ಲಿ ನೂತನ ರಾಷ್ಟ್ರೀಯ ಸಹಕಾರ ನೀತಿಯ ಕರಡು ಸಮಿತಿ ಸಭೆಯು ಇತ್ತೀಚೆಗೆ ಮಾಜಿ ಕೇಂದ್ರ ಸಚಿವರು ಹಾಗೂ ಕರಡು ಸಮಿತಿಯ ಅಧ್ಯಕ್ಷರಾದ ಸುರೇಶ್ ಪ್ರಭು ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ರಾಷ್ಟ್ರೀಯ ಸಹಕಾರ ಯೂನಿಯನ್ನಿನ ಅಧ್ಯಕ್ಷರಾದ ದಿಲೀಪ್ ಸಂಘಾನಿ ಮತ್ತು ಹಿರಿಯ ಸಹಕಾರಿ ಮುಖಂಡರುಗಳು, ಅಧಿಕಾರಿಗಳು ಭಾಗವಹಿಸಿದ್ದರು.



# ಸಂಕ್ರಮಣ ಕಾಲದಲ್ಲಿ 'ಸಹಕಾರ' ಎತ್ತ ಸಾಗಿದೆ? ಒಂದು ಚಿಂತನ-ಮಂಥನ

▶▶ **ಶಶಿಧರ ಎಲೆ,** ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ)

21ನೇ ಶತಮಾನದ ಕಾಲಘಟ್ಟದಲ್ಲಿ 19ನೇ ಶತಮಾನದಲ್ಲಿ ಆರಂಭಗೊಂಡ 'ಸಹಕಾರ' ಚಳುವಳಿ ಐರೋಪ್ಯ ರಾಷ್ಟ್ರಗಳಲ್ಲಿ ಮತ್ತು ಇತರೆ ರಾಷ್ಟ್ರಗಳಲ್ಲಿ 'ಖಾಸಗಿ ವಲಯ' ಸ್ಪರ್ಧೆ ಒಡ್ಡಿದಾಗ್ಯೂ ಈ ವಲಯವೂ ತನ್ನ ಅಸ್ತಿತ್ವವನ್ನು ಉಳಿಸಿ ಕೊಂಡು ಬೆಳೆಯುತ್ತಿರುವುದನ್ನು ಕಾಣುತ್ತ ಇದ್ದೇವೆ. ಆದರೆ, ಭಾರತದಲ್ಲಿ 'ಸಹಕಾರ' ಆರಂಭವಾದದ್ದು 'ಕಾಯ್ದೆ' ರೂಪಿಸುವ ಮುಖಾಂತರ ಮತ್ತು ಸರ್ಕಾರದ ಬೆಂಬಲದಿಂದ ಎಂದರೆ ತಪ್ಪಾಗುವುದಿಲ್ಲ.

ಭಾರತ ಸ್ವಾತಂತ್ರ್ಯ ನಂತರ 'ಮಿಶ್ರ ಆರ್ಥಿಕ' ನೀತಿ ಅನುಸರಿಸಿತು. ಆರ್ಥಿಕ ಬೆಳವಣಿಗೆಗೆ ಸಹಕಾರ ವಲಯ ಪ್ರಜಾಸತ್ತಾತ್ಮಕ ವಾದುದರಿಂದ ಈ ವಲಯದ ಮೂಲಕ ಅಭಿವೃದ್ಧಿ ಅಸಮತೋಲನ ಸಮಾಜ ನಿರ್ಮಾಣಕ್ಕೆ ಸಹಕಾರಿ ಎಂದು ಸರ್ಕಾರವೂ ಒಂದು ಭಾಗೀದಾರನಾಗಿ 'ಸಹಕಾರ'ಕ್ಕೆ ಪ್ರೋತ್ಸಾಹ ನೀಡಿ ಬೆಳವಣಿಗೆಗೆ ಪೂರಕವಾಗಿ ವರ್ತಿಸಿತು. ಆದರೆ ಈಗಿನ ಕಾಲಘಟ್ಟದಲ್ಲಿ ಖಾಸಗಿ ವಲಯ ಉಚ್ಚಾಯ ಮಟ್ಟದಲ್ಲಿರುವಲ್ಲಿ 'ಸಹಕಾರ'ದ ಔಚಿತ್ಯ, ಅಗತ್ಯತೆ, ಪ್ರಸ್ತುತತೆ ಪ್ರಶ್ನಾರ್ಹವಾಗಿ, ಅನುಮಾನ ಮೂಡುತ್ತಿರುವುದು ಭಾರತದಲ್ಲಿ ಅತ್ಯಂತ ಪ್ರಮುಖ ಅಂಶ ಎಂದೆನಿಸುತ್ತದೆ.

ಭಾರತದ ಶೇ. 01 ರ ಜನಸಂಖ್ಯೆಯಲ್ಲಿ ಭಾರತದ ಶೇ 40ರ ಸಂಪತ್ತು ಶೇಖರಗೊಂಡಿದೆ. 85 ಕೋಟಿ ಜನಸಂಖ್ಯೆಗೆ 'ಆಹಾರ ಭದ್ರತೆ' ಅಂಗವಾಗಿ ಉಚಿತ ಆಹಾರ ವಿತರಣೆಗೆ ಭಾರತ ಸರ್ಕಾರ ಕ್ರಮ ಕೈಗೊಳ್ಳಲಿದೆ. ಎಂಬ ವಾರ್ತೆಗಳು ಮನ ಕಲುಕುತ್ತವೆ. 'ಸಹಕಾರಿ' ಗಳಿಗೆ ತಮ್ಮ ಆತ್ಮಾವಲೋಕನಕ್ಕೆ ಎಡೆಮಾಡಿಕೊಡುವುದಲ್ಲವೇ? 90ರ ದಶಕದಿಂದ ಭಾರತ 'ಉದಾರೀಕರಣ, ಖಾಸಗೀಕರಣ, ಜಾಗತೀಕರಣ' ನೀತಿ ಅನುಸರಿಸಿದ್ದರಿಂದ ಜಾಗತಿಕ ಮಟ್ಟದಲ್ಲಿ ಭಾರತ ಆರನೇ ಅತಿ ಹೆಚ್ಚಿನ 'ಆರ್ಥಿಕತೆ' ರಾಷ್ಟ್ರವಾಗಿ ಹೊರ ಹೊಮ್ಮುತ್ತಿದೆ. 3 ಟ್ರಿಲಿಯನ್ ಡಾಲರ್ ಆರ್ಥಿಕತೆ ಇಂದ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯತ್ತ ಸಾಗುತ್ತಿದ್ದೇವೆ. ಇವು ಹೆಮ್ಮೆಯ ವಿಷಯವೇ ಸರಿ ಆದರೆ ಅಸಮತೋಲನ ಸಮಾಜ ನಿರ್ಮಾಣಕ್ಕೆ ಕಾರಣವಾಗುತ್ತಿದೆಯಲ್ಲವೇ? ಇದಕ್ಕೆ ಪರಿಹಾರ 'ಸಹಕಾರ ಆಂದೋಲನ' 'ಚಳುವಳಿ'ಯಲ್ಲಿ ಇದೆಯಲ್ಲವೇ? ಸಾಮಾಜಿಕ ನ್ಯಾಯ ದೊಡನೆ ಆರ್ಥಿಕ ಬೆಳವಣಿಗೆ ಇದರಿಂದ ಸ್ವಾವಲಂಬನೆ ಬದುಕು ಸಾಧ್ಯ ಅಲ್ಲವೇ? ಎಂಬ ಪ್ರಶ್ನೆಗಳು ಸಹಜವಾಗಿ ಮೂಡುತ್ತವೆ. ಆದರೆ, ವಾಸ್ತವದಲ್ಲಿ ಜರುಗುತ್ತಿರುವ ಬೆಳವಣಿಗೆಗಳು ಇದಕ್ಕೆ ಪೂರಕವಾಗಿ ಇವೆಯೇ? ಎಂಬ ವಿಶ್ಲೇಷಣೆ ಇಂದಿನ ಅಗತ್ಯತೆ.

ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರ ಪ್ರಯೋಜಿತ 'ಆಂದೋಲನ'ವಾಗಿ, ನಗರ, ಪಟ್ಟಣ ಪ್ರದೇಶಗಳಲ್ಲಿ ಜನರ (ಸದಸ್ಯರ) ಸ್ವಯಂ ಪ್ರೇರಿತ ಚಳುವಳಿಯಾಗಿ ರೂಪುಗೊಂಡಿತು. ಅಂದಿನ ಮೌಲ್ಯ ಆಧರಿತ, ಬದ್ಧತೆ ಉಳ್ಳ, ಪ್ರಾಮಾಣಿಕ ನಾಯಕತ್ವವೂ ಪ್ರಮುಖ ಕಾರಣವಾಗಿತ್ತು ಎಂಬ ಅಂಶವು ಅತಿ ಮಹತ್ವದ್ದು. ಇದರಿಂದಾಗಿ ಗ್ರಾಮಾಂತರ ಆರ್ಥಿಕ ಬೆಳವಣಿಗೆಯ ಆಯಾಮಗಳಿಗೆ ಸರ್ಕಾರವು 'ಸಹಕಾರ'ವನ್ನು ಅವಲಂಬಿಸಿತು. ಅದರಂತೆ 'ಯಶಸ್ಸ'ನ್ನು ಗಳಿಸಿತು. ನೂತನ ವೈಜ್ಞಾನಿಕ, ತಾಂತ್ರಿಕ ಆವಿಷ್ಕಾರಗಳನ್ನು ರೈತಾಪಿ ಜನರನ್ನೂ ಒಳಗೊಂಡಂತೆ ಗ್ರಾಮೀಣ ಜನತೆ ಅಳವಡಿಸಿಕೊಂಡು 'ಹಸಿರು ಕ್ರಾಂತಿ' 'ಶ್ವೇತ ಕ್ರಾಂತಿ' 'ನೀಲಿ ಕ್ರಾಂತಿ' 'ಹಳದಿ ಕ್ರಾಂತಿ'ಗೆ ಕಾರಣವಾದ್ದರಲ್ಲಿ, 'ಗ್ರಾಹಕ ಚಳುವಳಿ' 'ಕೈಗಾರಿಕೆ ಬೆಳವಣಿಗೆ' 'ಗುಡಿಕೈಗಾರಿಕೆ ಬೆಳವಣಿಗೆ' 'ಕೃಷಿ ಆಧಾರಿತ ಕೈಗಾರಿಕೆ ಬೆಳವಣಿಗೆ' ಯಲ್ಲಿ 'ಸಹಕಾರ ಆಂದೋಲನ' ಪ್ರಮುಖ ಪಾತ್ರ ನಿರ್ವಹಿಸಿದೆ ಎಂದರೆ ತಪ್ಪಾಗಲಾರದು. ಆದರೆ, ಈಗಿನ ಪರಿಸ್ಥಿತಿ ಏನು? ಆರ್ಥಿಕ ಬೆಳವಣಿಗೆಯಲ್ಲಿ ಸಹಕಾರದ ಪಾತ್ರ, ಪಾಲು ಎಷ್ಟಿದೆ? ಎಂಬುದರ ಪರಿಶೀಲನೆ ವಿಶ್ಲೇಷಣೆ ಅತ್ಯಗತ್ಯ.

**ಅಲ್ಪಾವಧಿ ಕೃಷಿ ಸಾಲ ವಲಯ :** ರಾಷ್ಟ್ರಾದ್ಯಂತ ಬಹುತೇಕ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ 'ಬೆಳೆಸಾಲ' ದುಡಿಯುವ ಬಂಡವಾಳ ಸಾಲ ಒದಗಿಸುತ್ತಿರುವ ವಲಯ, ರಾಷ್ಟ್ರದ್ಯಂತ 63000 ದಷ್ಟು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. 18 ಕೋಟಿ ಸದಸ್ಯತ್ವ ಹೊಂದಿದೆ. ಇದರದೇ ಆದ ಜಿಲ್ಲೆಗೆ ಒಂದು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ರಾಜ್ಯ ಸಹಕಾರ ಬ್ಯಾಂಕ್, ಮೂರು ಹಂತದ ವ್ಯವಸ್ಥೆ ನಿರ್ಮಾಣವಾಗಿದೆ. ಇತ್ತೀಚೆಗೆ ಕೇರಳ ಮತ್ತು ಛತ್ತಿಸಘಡ ರಾಜ್ಯಗಳಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳನ್ನು ರಾಜ್ಯ ಸಹಕಾರ ಬ್ಯಾಂಕ್‌ಗಳೊಡನೆ ವಿಲೀನಗೊಳಿಸಲಾಗಿ ಎರಡು ಹಂತದ ವ್ಯವಸ್ಥೆ ನಿರ್ಮಾಣವಾಗಿದೆ.

ಈ ಬಗ್ಗೆ ಇತರೆ ರಾಜ್ಯಗಳಲ್ಲಿ ಕ್ರಮ ವಹಿಸುವ ಮುನ್ನ ಸಾಧಕ ಭಾಧಕಗಳ ಬಗ್ಗೆ ಕೇಂದ್ರ ಸರ್ಕಾರ 'ಅಧ್ಯಯನ ಸಮಿತಿ' ಯನ್ನು ರಚಿಸಿದೆ. ಕೇಂದ್ರ ಆಡಳಿತ ಪ್ರದೇಶಗಳಲ್ಲಿ ಎರಡು ಹಂತದ ವ್ಯವಸ್ಥೆ ಇರುತ್ತದೆ. 60ರ ದಶಕದಲ್ಲಿ ಈ ವಲಯ ಏಕ ಸ್ವಾಮ್ಯತೆ ಹೊಂದಿದ್ದು ಬ್ಯಾಂಕ್‌ಗಳ ರಾಷ್ಟ್ರೀಕರಣ, ಗ್ರಾಮೀಣ ಬ್ಯಾಂಕ್‌ಗಳ ಆರಂಭ, ಭಾರತೀಯ ರಿಸರ್ವ್ ಬ್ಯಾಂಕ್‌ನ 'ಆದ್ಯತಾ ವಲಯ' ಸಾಲ ನೀತಿಯಿಂದಾಗಿ ವಿತರಿಸುತ್ತಿರುವ ಸಾಲದಲ್ಲಿ ಹೆಚ್ಚಳವಾಗುತ್ತಿದ್ದರೂ ಸಹಕಾರದ ಪಾಲು ಶೇ. 20 ರಷ್ಟು ಮಾತ್ರ ಇರುತ್ತದೆ. ಆದರೂ ಶೇ. 80 ಕ್ಕೂ ಮೀರಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಾಲ ವಿತರಿಸುತ್ತಿದೆ. ಕರ್ನಾಟಕವೂ ಒಳಗೊಂಡಂತೆ ಅನೇಕ ರಾಜ್ಯಗಳಲ್ಲಿ 'ಶೂನ್ಯ' ಬಡ್ಡಿ ದರ ಅಥವ ರಿಯಾಯಿತಿ ದರದಲ್ಲಿ ಸಾಲ ವಿತರಿಸಲಾಗುತ್ತಿದೆ. ರಾಜ್ಯ ಸರ್ಕಾರಗಳು ಬಡ್ಡಿ, ಉಳಿಕೆ ಬಡ್ಡಿ ಹಣವನ್ನು ರೈತರ ಪರವಾಗಿ ಭರಿಸುತ್ತಿವೆ. ಕೇಂದ್ರ ಸರ್ಕಾರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸಂಖ್ಯೆಯನ್ನು ಮೂರು ಲಕ್ಷಕ್ಕೆ ಏರಿಸಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದೆ. ಈ ಸಂಘಗಳನ್ನು 'ಬಹು ಸೇವಾ ಕೇಂದ್ರ'ಗಳಾಗಿ ಪರಿವರ್ತಿಸುವುದಕ್ಕೆ ಯೋಜನೆ ಅನುಷ್ಠಾನ (ನಬಾರ್ಡ್ ಮೂಲಕ) ಗೊಳಿಸಲಾಗುತ್ತಿದೆ.

ಇದಕ್ಕಾಗಿ ಕೇಂದ್ರ ಸರ್ಕಾರದ 'ಒಂದು ಲಕ್ಷ ಕೋಟಿ'ಯ ರೈತರ ಮೂಲಭೂತ ಸೌಕರ್ಯ ನಿಧಿಯನ್ನು ಬಳಸಲಾಗುತ್ತಿದೆ. ಸಾಂಸ್ಥಿಕ ಸುಧಾರಣೆ ಅಂಗವಾಗಿ ಕಂಪ್ಯೂಟರೀಕರಣ, ಸಾಮಾನ್ಯ ಲೆಕ್ಕ ಪದ್ಧತಿ ಅನುಷ್ಠಾನ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಕೋರ್ ಬ್ಯಾಂಕಿಂಗ್‌ನೊಡನೆ ಸಂಯೋಜನೆ, ಮೈಕ್ರೊ ಎ.ಟಿ.ಎಂ. ಗಳ ಸ್ಥಾಪನೆ.

**ಹೈನುಗಾರಿಕೆ ವಲಯ :** ಭಾರತ ಈಗ ವಿಶ್ವದಲ್ಲಿಯೇ ಅತಿ ಹೆಚ್ಚು ಹಾಲು ಉತ್ಪನ್ನ ಮಾಡುವ ರಾಷ್ಟ್ರವಾಗಿ ರೂಪುಗೊಂಡಿದೆ. ಸ್ವಾತಂತ್ರ್ಯ

ಬಂದ ಹೊಸ್ತಿಲಲ್ಲಿ ಒಬ್ಬ ಭಾರತೀಯ ಪ್ರಜೆಗೆ ಲಭ್ಯ ಹಾಲಿನ ಪ್ರಮಾಣ 110 ಮಿಲಿ. ಈಗ ಅದು 400 ಮಿಲಿ. ತಲುಪಿದೆ. ಇದರ ಶ್ರೇಯ ಭಾರತೀಯ ರೈತ ಕುಟುಂಬಗಳಿಗೆ ಅದರಲ್ಲೂ ರೈತ ಮಹಿಳೆಯರಿಗೆ ಸೇರುತ್ತದೆ. ಹಾಲಿನ ಉತ್ಪಾದನೆ, ಶೇಖರಣೆ, ಸಂಸ್ಕರಣೆ, ಮಾರಾಟ ಇದರಲ್ಲಿ ಯಶಸ್ಸು ಸಾಧನೆಗೆ ಕಾರಣ 'ಅಮುಲ್ ಮಾದರಿ' ಗ್ರಾಮೀಣ ಮಟ್ಟದ ಹಾಲು ಉತ್ಪಾದಕರ ಸಹಕಾರ ಸಂಘಗಳು, ಜಿಲ್ಲಾ ಒಕ್ಕೂಟಗಳು ಮತ್ತು ರಾಜ್ಯ ಸಹಕಾರ ಮಹಾಮಂಡಳ. ಈ ಶೃಂಗ ವ್ಯವಸ್ಥೆಯಲ್ಲಿನ ಯಶಸ್ಸಿಗೆ ಕಾರಣ, ಅತ್ಯುತ್ತಮ ನಾಯಕತ್ವ, ಬದ್ಧತೆ, ಪ್ರಾಮಾಣಿಕತೆ, ಪ್ರತಿ ಹಂತದಲ್ಲಿ ತನ್ನ ಕೆಲಸ ಕಾರ್ಯಗಳ ಬಗ್ಗೆ ವಿಂಗಡನೆ ಮತ್ತು ಸಾವಯವ ಸಂಬಂಧಗಳ ಗೌರವಿಸುವಿಕೆ ಮತ್ತು ಆಚರಣೆ. ಗುಜರಾತ್ ರಾಜ್ಯದಲ್ಲಿನ ಹಾಲಿನ ಯಥೇಚ್ಚ ಉತ್ಪಾದನೆ ನಾಡಿನ 'ಉಕ್ಕಿನ ಮನುಷ್ಯ' ಎಂದೇ ಖ್ಯಾತಿ ಹೊಂದಿದ ಡಾ। ಸರ್ದಾರ್ ವಲ್ಲಭಭಾಯಿ ಪಟೇಲರ ದೂರದೃಷ್ಟಿಯ ಫಲ, ಸಹಕಾರದ ಮೇಲಿನ ನಂಬಿಕೆ. ತ್ರಿಭುವನ್ ದಾಸ್ ಪಟೇಲರ ನಾಯಕತ್ವ, ವರ್ಗೀಸ್ ಕುರಿಯನ್ ರವರ ಬದ್ಧ ಶ್ರಮ, ತನ್ಮಯತೆ, ಬುದ್ಧಿವಂತಿಕೆ 'ಅಮುಲ್' ಯಶಸ್ಸಿಗೆ ಕಾರಣವಾಯಿತು. ಅಂದಿನ ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರಿಯವರ ದೂರದೃಷ್ಟಿಯ ಫಲ ರಾಷ್ಟ್ರದ್ಯಂತ 'ಸಹಕಾರಿ' ಮಾದರಿಯಲ್ಲಿ ಹೈನುಗಾರಿಕೆ ಅಭಿವೃದ್ಧಿ ಹೊಂದಲು ಕಾರಣವಾಯಿತು. ಇದರಲ್ಲಿ ವರ್ಗೀಸ್ ಕುರಿಯನ್ ರವರ ಅದ್ವಿತೀಯ ನಾಯಕತ್ವ, ರಾಷ್ಟೀಯ ಹೈನು ಅಭಿವೃದ್ಧಿ ಮಂಡಳಿ ಮೂಲಕ ಕೈಗೊಂಡ ಹೈನು ಅಭಿವೃದ್ಧಿ ಯೋಜನೆಯಿಂದ ಇದು ಕಾರ್ಯಸಾಧ್ಯವಾಯಿತು. ಆದುದರಿಂದಲೇ ಅವರನ್ನು ಶ್ವೇತ ಕ್ರಾಂತಿಯ ಪಿತಾಮಹ ಎಂದು ಗುರುತಿಸಲಾಗಿದೆ. ಕರ್ನಾಟಕದಲ್ಲಿ ಅದರ ಯಶಸ್ವಿ ಅನುಷ್ಠಾನದಿಂದ, 'ನಂದಿನಿ' ಒಂದು ಬ್ರಾಂಡ್ ಆಗುವುದಕ್ಕೆ ಕಾರಣವಾಗಿದೆ. ರಾಷ್ಟದಾದ್ಯಂತ ಹೆಗ್ಗಳಿಕೆಗೆ ಪಾತ್ರವಾಗಿರುವ 'ಅಮುಲ್' ಮತ್ತು ಕರ್ನಾಟಕದ 'ನಂದಿನಿ' ಹೊರತುಪಡಿಸಿದರೆ ಇತರೆ ರಾಜ್ಯಗಳಲ್ಲಿ 'ಸಹಕಾರ ಮಾದರಿ' ಯಶಸ್ಸು ಕಂಡದ್ದು ಈಗ ಕುಸಿತ ಕಂಡಿದೆ. ಒಟ್ಟಾರೆ ಮಾರುಕಟ್ಟೆಯಲ್ಲಿ ಸಹಕಾರದ ಪಾಲು ಶೇ. 20. ಖಾಸಗಿ ವಲಯ ಸ್ಪರ್ಧೆ ಒಡ್ಡುವುದು ಅಷ್ಟೇ ಅಲ್ಲ, ವ್ಯವಸ್ಥೆಯನ್ನು ಹಾಳುಗೆಡುವಲು ಪ್ರಯತ್ನಿಸುತ್ತಿದೆ. ಕರ್ನಾಟಕದಲ್ಲಿ ಪ್ರತಿ ಲೀಟರು ಹಾಲಿಗೆ ರೈತರಿಗೆ ರೂ 5/– ಪ್ರೋತ್ಸಾಹಧನ ಸರ್ಕಾರ ರೈತರಿಗೆ ನೀಡುತ್ತ ಇದೆ. ಶಾಲಾ ಮಕ್ಕಳಿಗೆ 'ಕ್ಷೀರ ಭಾಗ್ಯ' ಯೋಜನೆ ಅನುಷ್ಠಾನ ಗೊಳಿಸುತ್ತಿದ್ದು ಅಗತ್ಯ ಹಾಲಿನ ಪುಡಿಯನ್ನು ಕೆ.ಎಂ.ಎಫ್ (ಹಾಲು ಮಹಾಮಂಡಳಿ) ಇಂದ ಖರೀದಿಸುತ್ತಿದೆ. ಈ ಯೋಜನೆಗಳು ಕರ್ನಾಟಕದ 'ನಂದಿನಿ' ಯನ್ನು ಬಲಪಡಿಸಿದೆ. 'ಅಮುಲ್' ಮತ್ತು 'ನಂದಿನಿ' ವಿಲೀನದ ಬಗ್ಗೆ ವಿಷಯಗಳು ಮುನ್ನೆಲೆಗೆ ಬಂದು ವಿವಾದಕ್ಕೆ ಎಡೆಮಾಡಿಕೊಟ್ಟಿದೆ.

**ದೀರ್ಘಾವಧಿ ಸಾಲ ಕ್ಷೇತ್ರ :** ಎರಡು ಹಂತದ ವ್ಯವಸ್ಥೆ ಇದಾಗಿದ್ದು ಹಲವು ರಾಜ್ಯಗಳಲ್ಲಿ ಅಸ್ತಿತ್ವ ಇಲ್ಲದಾಗಿದೆ. ಅಲ್ಪಾವಧಿ ಕ್ಷೇತ್ರದೊಡನೆ ವಿಲೀನಗೊಂಡಿದೆ. ಕೇವಲ 18 ರಾಜ್ಯಗಳಲ್ಲಿ ಅಸ್ತಿತ್ವದಲ್ಲಿದ್ದರೂ ನಬಾರ್ಡ್ ಪ್ರವರ್ಧನ ಸೌಲಭ್ಯದೊಡನೆ ಅತಿ ಕಡಿಮೆ ಮಟ್ಟದಲ್ಲಿ ಸಾಲ ವಿತರಣೆಯಾಗುತ್ತಿದೆ. ಪ್ರಾಥಮಿಕ ಹಂತದಲ್ಲಿ ವೈವಿಧ್ಯಮಯ ಸಾಲ ವಿತರಿಸುವ ಮೂಲಕ ಕೆಲವು ಸಂಸ್ಥೆಗಳು ತಮ್ಮ ಅಸ್ತಿತ್ವ ಉಳಿಸಿಕೊಂಡಿವೆ.

**ಸಹಕಾರ ಸಕ್ಕರೆ ಕಾರ್ಖಾನೆಗಳು :** ಕರ್ನಾಟಕದಲ್ಲಿ ಕೇವಲ 2–3 ಸಹಕಾರ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ. ಇತರೆ ಖಾಸಗಿಕರಣಗೊಂಡಿವೆ. ಇದೇ ಸ್ಥಿತಿ ಇತರೆ ರಾಜ್ಯಗಳಲ್ಲಿಯೂ ಇದ್ದು, ಕೇವಲ ಗುಜರಾತ್ ರಾಜ್ಯದಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ.

**ನೇಕಾರರ ಸಹಕಾರ ಸಂಘಗಳು :** ತಮಿಳುನಾಡು, ಆಂಧ್ರಪ್ರದೇಶ (ಅವಿಭಾಜ್ಯ) ಹೊರತುಪಡಿಸಿ ಯಶಸ್ವಿಯಾಗಿ ಕಾರ್ಯನಿರ್ವಹಸುತ್ತಿಲ್ಲ.

**ಮೀನುಗಾರಿಕೆ ಕ್ಷೇತ್ರ :** ಒಳನಾಡು ಮತ್ತು ಕರಾವಳಿ ಭಾಗದಲ್ಲಿ ಈ ಸಹಕಾರ ಸಂಘಗಳು ಮತ್ತು ಇದರ ಒಕ್ಕೂಟಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಸರ್ಕಾರದ ಬೆಂಬಲ, ಯೋಜನೆಗಳ ಅನುಷ್ಠಾನ ಮತ್ತು ನೀತಿ ಇವುಗಳಿಗೆ ಪೂರವಾಗಿವೆ. ಗ್ರಾಹಕರ, ಕೈಗಾರಿಕೆ, ಗೃಹಕೈಗಾರಿಕೆ, ಗೃಹ ನಿರ್ಮಾಣ, ವಲಯಗಳು ಪೂರ್ಣ ಇಲ್ಲವಾಗುತ್ತಿವೆ. ಕೃಷಿ ಮಾರುಕಟ್ಟೆ ವಲಯದಲ್ಲಿ ತಾಲ್ಲೂಕು ಸಂಸ್ಥೆಗಳು ಕೆಲವು ಮಾತ್ರ ಮಾರುಕಟ್ಟೆ ಚಟುವಟಿಕೆ ನಡೆಸುತ್ತವೆ.

ರಾಜ್ಯ ಮಹಾಮಂಡಳಗಳು ಕೆಲವು ರಾಜ್ಯಗಳಲ್ಲಿ ಮಾರುಕಟ್ಟೆ, ರಸಗೊಬ್ಬರ ಮಾರಾಟದಲ್ಲಿ ತೊಡಗಿಸಿಕೊಂಡಿವೆ. ರಾಷ್ಟಮಟ್ಟದಲ್ಲಿ 'ನ್ಯಾಫೆಡ್' ಕಾರ್ಯನಿರ್ವಹಿಸುತ್ತಿದ್ದು ಸರ್ಕಾರದ ಪರವಾಗಿ ಕನಿಷ್ಠ ಬೆಂಬಲ ಯೋಜನೆ ಖರೀದಿ, ಆಮದು ಮತ್ತು ರಫ್ತು ವಹಿವಾಟು ನಡೆಸುತ್ತಿದೆ. ಇತ್ತೀಚೆಗೆ ಕೇಂದ್ರ ಸರ್ಕಾರವು ರಾಜ್ಯಮಟ್ಟದಲ್ಲಿ ಸಾವಯವ ಉತ್ಪನ್ನ ಮಾರಾಟ ಮಾಡುವ ಮತ್ತು ಆಮದು ರಫ್ತು ಉದ್ದೇಶವುಳ್ಳ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಲು ಉದ್ದೇಶಿಸಿರುವುದಾಗಿ ತಿಳಿಸಿದೆ.

**ಕೃಷಿಯೇತರ ಪತ್ತು ವಲಯ :** ಪಟ್ಟಣ ಸಹಕಾರ ಬ್ಯಾಂಕ್‌ಗಳು ಅತ್ಯುತ್ತಮವಾಗಿ ಇತರೆ ವಲಯಗಳಿಗೆ ಸ್ಪರ್ಧಾತ್ಮಕವಾಗಿ ಎಲ್ಲ ಸೇವೆಗಳನ್ನು ಒದಗಿಸುವ ಮುಖಾಂತರ ತಮ್ಮ ಛಾಪು ಮೂಡಿಸಿವೆ. ಅದರಲ್ಲಿಯೂ ಗುಜರಾತ್, ಮಹಾರಾಷ್ಟ, ಕರ್ನಾಟಕದಲ್ಲಿ ಮಂಚೂಣಿಯಲ್ಲಿವೆ. ಪಂಜಾಬ್ ಅಂಡ್ ಮಹಾರಾಷ್ಟ ಕೋ ಆಪರೇಟಿವ್ ಬ್ಯಾಂಕ್, ಬೆಂಗಳೂರಿನ ಗುರು ರಾಘವೇಂದ್ರ ಕೋ ಆಪರೇಟಿವ್ ಬ್ಯಾಂಕ್ ನಲ್ಲಿನ 'ಹಗರಣ'ಗಳು ನಾಗರೀಕರನ್ನು ಬೆಚ್ಚಿಬೀಳಿಸಿವೆ. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ಆಗಿ ಆರ್.ಬಿ.ಐ. ಹೆಚ್ಚಿನ ನಿಯಂತ್ರಣ ಹೊಂದುವದಕ್ಕೆ ಕಾರಣವಾಗಿದೆ.

ಅನೇಕ ನೌಕರರ ಪತ್ತಿನ ಸಹಕಾರಿ ಸಂಘಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸಿವೆ. ಹಾಗೆಯೇ, ಇತರೆ ಪತ್ತಿನ ಸಹಕಾರ ಸಂಘಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸಿವೆ. ಕರ್ನಾಟಕದಲ್ಲಿ ಸೌಹಾರ್ಧ ಕಾಯ್ದೆ ಜಾರಿಗೆ ಬಂದು ಅದರಂತೆ ಅದು ಕೂಡ ಒಂದು 'ಆಂದೋಲನ'ದ ಸ್ವರೂಪವನ್ನು ಪಡೆದಿದೆ. 5000 ಕ್ಕೂ ಮೀರಿ ಸಹಕಾರ ಸಂಘಗಳಾಗಿದ್ದು ಬಹುತೇಕ ಪತ್ತಿನ ಸಹಕಾರ ಸಂಘಗಳೇ ಆಗಿವೆ. ಅವರದೇ ಮಹಾಮಂಡಳವಾದ 'ಸಂಯುಕ್ತ ಸಹಕಾರಿ' ಶಾಸನಬದ್ಧ ಅಧಿಕಾರದೊಡನೆ ಸಹಕಾರಿ ಶಿಕ್ಷಣ, ತರಬೇತಿ, ಪ್ರಚಾರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ.

'ಸಣ್ಣದು ಸುಂದರ' ಎಂಬ ಪರಿಕಲ್ಪನೆಯಲ್ಲಿ ಆರಂಭಗೊಂಡ ಸಹಕಾರ ಸಂಘಗಳು ತಮ್ಮ ಸದಸ್ಯರಿಗೆ ಹೆಚ್ಚಿನ ಸೇವೆ, ಸೌಲಭ್ಯ ಒದಗಿಸಲು ತಮ್ಮ ಸಂಪನ್ಮೂಲಗಳನ್ನು ವೃದ್ಧಿಗೊಳಿಸಲು ಅನುವಾಗಲು ತಮ್ಮದೇ ಆದ 'ಸಹಕಾರ ಒಕ್ಕೂಟ ವ್ಯವಸ್ಥೆ' ನಿರ್ಮಾಣಗೊಂಡಿದೆ. ಕೆಲವೇ ವಲಯಗಳಲ್ಲಿ ಈ ಒಕ್ಕೂಟ ವ್ಯವಸ್ಥೆ ಉದ್ದೇಶಗಳನ್ನು ಪೂರೈಸಿ ಯಶಸ್ವಿ ಕಾರ್ಯಾಚರಣೆ ನಡೆಸಿವೆ. ಉದಾ: ಅಲ್ಪಾವಧಿ ಕೃಷಿ ಪತ್ತು ಹೈನುಗಾರಿಕೆ. ಇತರೆ ವಲಯಗಳಲ್ಲಿ ಉನ್ನತ ಹಂತಕ್ಕೆ ಪ್ರತಿನಿಧಿಸಲು ಮಾತ್ರ ಕೆಳಹಂತದ

ವ್ಯವಸ್ಥೆ ಇದ್ದು ಕಾರ್ಯಾಚರಣೆ ಸಂಬಂಧಗಳು ಸ್ಥಗಿತಗೊಂಡಿವೆ. ಕೆಲವು ವಲಯಗಳಲ್ಲಿ ಮೇಲ್‌ಸ್ಥರದ ಸಂಸ್ಥೆಗಳು ಇಲ್ಲವಾಗಿದೆ. ಈ ಹಂತದಲ್ಲಿ ಬದಲಾಗುತ್ತಿರುವ ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ ಸನ್ನಿವೇಶಗಳಲ್ಲಿ ಅವಶ್ಯಕತೆಗಳನುಸಾರ 'ಸಹಕಾರ ಚಳುವಳಿ'ಯ ದಿಕ್ಕು ದೆಸೆ ಎತ್ತಕಡೆ ಸಾಗುತ್ತಿದೆ, ಸಾಗಬೇಕಿದೆ ಈ ಸಂಕ್ರಮಣದ ಕಾಲಘಟ್ಟದಲ್ಲಿ 'ಸಹಕಾರ ಚಳುವಳಿ'ಯ ನಾಯಕತ್ವ ಪ್ರಮುಖಪಾತ್ರ ನಿರ್ವಹಿಸುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ನಮ್ಮ ರಾಷ್ಟದಲ್ಲಿ 'ನಾಯಕತ್ವ' ಚಾರಿತ್ರಾತ್ಮಕವಾಗಿ ಸರ್ಕಾರದಲ್ಲಿಯೇ ಇದೆಯೆ ? ರಾಜಕೀಯ ತಳುಕು ಹಾಕಿಕೊಂಡೆ ಮುಂದುವರಿದಿದೆಯೇ? ಎಂಬ ಮೂಲ ಭೂತ ಪ್ರಶ್ನೆಗಳು ಕಾಡುತ್ತವೆ. ಈ ಮೇಲಿನ ಹಿನ್ನೆಲೆಯಲ್ಲಿ ನೋಡಿದಾಗ 90ರ ದಶಕದಿಂದೀಚೆಗೆ ಅನೇಕ ಬದಲಾವಣೆಗಳನ್ನು ಕಾಣುತ್ತಲಿದ್ದೇವೆ. ಸಂವಿಧಾನದಲ್ಲಿ ಏಳನೇ ಷೆಡ್ಯೂಲ್‌ನಲ್ಲಿ ನಮೂದನೆ 32ರಲ್ಲಿ ರಾಜ್ಯ ವಿಷಯವಾಗಿರುತ್ತದೆ.

ಏಳನೇ ಷೆಡ್ಯೂಲ್‌ನ ನಮೂದನೆ 44 ರಲ್ಲಿ ಒಕ್ಕೂಟದ ವಿಷಯವಾಗಿ ಪರಿಗಣಿಸಿದೆ. ಇದರಿಂದ ಆಯಾ ರಾಜ್ಯಗಳು ತಮ್ಮದೇ ಆದ ಸಹಕಾರ ಕಾಯ್ದೆ, ಕಾನೂನು ಹೊಂದಿವೆ. ಕೇಂದ್ರ (ಒಕ್ಕೂಟ) ಸರ್ಕಾರ ಬಹುರಾಜ್ಯ ಸಹಕಾರ ಕಾಯ್ದೆ ಕಾನೂನು ಹೊಂದಿದೆ. ಒಟ್ಟಾರೆ ಭಾರತದ ಆರ್ಥಿಕ ಬೆಳವಣಿಗೆಯ ಜವಾಬ್ದಾರಿ ಕೇಂದ್ರ ಸರ್ಕಾರದ್ದಾಗಿದೆ. 'ಸಹಕಾರ'ವೂ ಒಟ್ಟಾರೆ ಆರ್ಥಿಕತೆಯ ಭಾಗವಾಗಿರುತ್ತದೆ. ಈ ದೃಷ್ಟಿಯಲ್ಲಿ ಕೇಂದ್ರ ಸರ್ಕಾರ ಅನೇಕ ಉಪಕ್ರಮಗಳನ್ನು ಕಾಲ ಕಾಲಕ್ಕೆ ತೆಗೆದುಕೊಳ್ಳುತ್ತಾ ಬರುತ್ತಿದೆ. 1954 ರಲ್ಲಿ ಮಾದರಿ ಕಾಯ್ದೆ ರಚನೆ, ಅಳವಡಿಸಿಕೊಳ್ಳಲು ರಾಜ್ಯಗಳಿಗೆ ಸೂಚನೆ, ಎ.ಡಿ. ಗೊರ್ವಲಾ ಸಮಿತಿ ಶಿಫಾರಸ್ಸುಗಳ ಅನುಷ್ಠಾನದಿಂದ ಇತರೆ ಅನೇಕ ಸಮಿತಿಗಳ ರಚನೆ ಅನುಷ್ಠಾನ, ಪಂಚವಾರ್ಷಿಕ ಯೋಜನೆಗಳಲ್ಲಿ ಸಹಕಾರಕ್ಕೆ ಬೆಂಬಲ, ನಬಾರ್ಡ್, ಎನ್‌ಸಿಡಿಸಿ ಸ್ಥಾಪನೆ, ಅವುಗಳ ಮೂಲಕ ಯೋಜನೆಗಳ ಅನುಷ್ಠಾನ.

90ರ ದಶಕದಿಂದ ಈಚೆಗೆ ಸಹಕಾರವು ಸರ್ಕಾರದ ಬೆಂಬಲವಿಲ್ಲದೆ ಸ್ವಾವಲಂಬನೆ ಸಾಧಿಸಬೇಕೆಂಬ ದೋರಣೆ ತಾಳಲಾಯಿತು. ರಾಜ್ಯ ಸರ್ಕಾರಗಳು ಸಹಕಾರ ಸಂಘಗಳ ಮೇಲಿನ ತಮ್ಮ ಹಿಡಿತ ನಿಯಂತ್ರಣ ಸಡಿಲಗೊಳಿಸುವಂತೆ ಕೇಂದ್ರದಿಂದ ನಿರ್ದೇಶಿಸಲಾಯಿತು. ಇದರ ಪಾಲನೆ ಆಗಲಿಲ್ಲ. ಆಗ ಪರ್ಯಾಯ ಕಾಯ್ದೆ ಜಾರಿತರುವಂತೆ ಸಹಕಾರ ಸಂಘಗಳಲ್ಲಿ ಸ್ವಾಯತ್ತತೆ, ಸ್ವಾತಂತ್ರ್ಯ ಇರುವಂತಹ (ಅರ್ಧನಾರೀಶ್ವರನ್ ಸಮಿತಿ) ಮಾದರಿ ಕಾಯ್ದೆ ರಚಿಸಿ ರಾಜ್ಯಗಳಿಗೆ ನಿರ್ದೇಶಿಸಲಾಯಿತು.

ಆಂಧ್ರ ಪ್ರದೇಶ (ಅವಿಭಾಜ್ಯ) ಆದರ್ಶ ಸಹಕಾರ ಕಾಯ್ದೆ ಜಾರಿಗೆ ತಂದ ಮೊದಲ ರಾಜ್ಯವಾಯಿತು. ಕರ್ನಾಟಕದಲ್ಲಿ ತಡವಾಗಿ 1997ರಲ್ಲಿ, ಸೌಹಾರ್ಧ ಸಹಕಾರ ಕಾಯ್ದೆ ಜಾರಿಗೆ ಬಂತು. ನಿಯಮ 2004 ರಲ್ಲಿ ರಚನೆಯಾಯಿತು. ಕೇವಲ 08 ರಾಜ್ಯಗಳಲ್ಲಿ ಮಾತ್ರ ಇದನ್ನು ಜಾರಿಗೆ ತರಲಾಯಿತು. ಮುಂದೆ 97ನೇ ಸಂವಿಧಾನ ತಿದ್ದುಪಡಿ 13 ಜನವರಿ 2012 ರಿಂದ ಜಾರಿಗೆ ಬಂದು ಅದರಂತೆ ಒಂದು ವರ್ಷದ ಒಳಗೆ ರಾಜ್ಯ ಸರ್ಕಾರಗಳು ತಮ್ಮ ಕಾಯ್ದೆ ತಿದ್ದುಪಡಿ ಮಾಡುವಂತೆ ಸೂಚಿಸಲಾಗಿತ್ತು. ಇದುವೇ ಕರ್ನಾಟಕದಲ್ಲಿ ಕಾಯ್ದೆ 1959 ಕ್ಕೆ ಸಮಗ್ರ ತಿದ್ದುಪಡಿಗೆ ಕಾರಣವಾಯಿತು. 97ನೇ ಸಂವಿಧಾನ ತಿದ್ದುಪಡಿಯ ಪ್ರಮುಖ ಅಂಶಗಳೆಂದರೆ 'ಅನುಚ್ಛೇದ 19 ರಲ್ಲಿ ಸಹಕಾರ ಸಂಘ ಸ್ಥಾಪನೆ ಭಾರತೀಯ ಪ್ರಜೆಯ ಮೂಲಭೂತ ಹಕ್ಕಾಗಿ ಪರಿಗಣನೆಗೆ ತೆಗೆದುಕೊಂಡಿರುವದು. ಅನುಚ್ಛೇದ 43ಃ ಯಲ್ಲಿ ರಾಜ್ಯ ಸರ್ಕಾರಗಳು ತಮ್ಮ ಕಾಯ್ದೆಯಲ್ಲಿ ಪಾಲಿಸಬೇಕಾದ ನೀತಿಯನ್ನು ತಿಳಿಸಿರುವುದು, ಕಾಯ್ದೆಯು ಸಹಕಾರ ಸಂಘಗಳ ಸ್ವಇಚ್ಛೆಯ ರಚನೆ, ಸ್ವಾಯತ್ತ ಕಾರ್ಯಾಚರಣೆ, ಪ್ರಜಾಸತ್ತಾತ್ಮಕ ಹತೋಟಿ ಮತ್ತು ವೃತ್ತಿಪರ ವ್ಯವಸ್ಥಾಪನೆಯನ್ನು ಪ್ರೋತ್ಸಾಹಿಸುವುದು ಎಂದಿದೆ. ಈ ಅಂಶಗಳಿಗೆ ಪೂರಕವಾಗಿ 243 ಜಊ ನಿಂದ 243 ಜಖ ವರೆಗೆ ಕಾಯ್ದೆಯಲ್ಲಿ ಅಳವಡಿಸಬೇಕಾದ ಅಂಶಗಳ ಬಗ್ಗೆ ಸವಿವರವಾಗಿ ತಿಳಿಸಲಾಗಿದೆ. ಈ ತಿದ್ದುಪಡಿ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಲಯವು 23ರ ಜುಲೈ 2021 ರಂದು ರಾಜ್ಯಗಳಿಗೆ ಅನುಚ್ಛೇದ 19 ಮತ್ತು 43ಃ ಅನ್ವಯವಾಗುತ್ತದೆ ಆದರೆ 243 ಜಊ ನಿಂದ ಜಖ ವರೆಗಿನ ತಿದ್ದುಪಡಿಗಳು ಅನ್ವಯವಾಗುವುದಿಲ್ಲ ಎಂಬ ತೀರ್ಪು ನೀಡಿದೆ. ಆದರೆ ಬಹುರಾಜ್ಯ ಕಾಯ್ದೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯವಾಗುತ್ತದೆ ಎಂದು ತೀರ್ಪು ನೀಡಿದೆ.

ಕೇಂದ್ರ ಸರಕಾರದಲ್ಲಿ ಇದುವರೆವಿಗೂ 'ಸಹಕಾರ' ವಿಭಾಗ ಕೃಷಿ ಇಲಾಖೆಯಿಂದ ನಿರ್ವಹಿಸುತ್ತಿತ್ತು. ಈಗ ಪ್ರತ್ಯೇಕ ಸಚಿವಾಲಯ ರಚಿಸಿದ್ದು ಪ್ರತ್ಯೇಕ ಸಚಿವರು ನೇಮಕ ಗೊಂಡಿರುತ್ತಾರೆ. ಬಹುರಾಜ್ಯಕಾಯ್ದೆಯಲ್ಲಿ ಸುಮಾರು 1500 ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಲಾಗಿದೆ. ಇತ್ತೀಚೆಗೆ ಇದರ ಕಾಯ್ದೆಯನ್ನು ತಿದ್ದುಪಡಿಗೆ ಒಳಪಡಿಸಲಾಗಿದೆ. ಬಹಳ ಅಂಶಗಳು ಸರ್ಕಾರದ ನಿಯಂತ್ರಣ ಹೆಚ್ಚಳಗೊಳಿಸಿರುವಂತೆ ಗೋಚರವಾಗುತ್ತಿದೆ. ಈ ತಿದ್ದುಪಡಿಗಳ ಪರಿಶೀಲನೆಗೆ ಲೋಕಸಭಾ ಉಪಸಮಿತಿಗೆ ಒಪ್ಪಿಸಲಾಗಿದೆ. ಆದುದರಿಂದ ಇನ್ನೂ ಜಾರಿಗೆ ಬಂದಿರುವುದಿಲ್ಲ. ಈ ಬೆಳವಣಿಗೆಗಳನ್ನು ಗಮನಿಸಿದಲ್ಲಿ ಭಾರತದಲ್ಲಿ ಸಹಕಾರ ಚಳುವಳಿ ಇನ್ನೂ ಜನರ ಚಳುವಳಿಯಾಗಿಲ್ಲವೇ ಎಂಬ ಅನುಮಾನಗಳು ಉಂಟಾಗುತ್ತದೆ. ನೂತನ ಆರ್ಥಿಕ ಪರಿಸರದಲ್ಲಿ ಸಹಕಾರ ವಲಯಕ್ಕೆ ಸವಾಲು ನೂರಾರು. ಅದರಲ್ಲಿ ಪ್ರಮುಖ ಸವಾಲು 'ನಾಯಕತ್ವ'. ಸಹಕಾರ ಸಂಘ ಒಂದು ಸಂಘಟನೆ. ಸಂಘಟನೆಯ ಉದ್ದೇಶಗಳ ಅರಿವು, ಅನುಸರಿಸಬೇಕಾದ ದಾರಿ ಬಗ್ಗೆ ಸ್ಪಷ್ಟ ನಿಲುವು ಹೊಂದಿರಬೇಕು.

ನೂತನ ಆರ್ಥಿಕತೆಯಲ್ಲಿ ಅಸಂಘಟಿತ ವಲಯ, ಕಾರ್ಮಿಕರು, ಕೂಲಿಗಳು, ವಸ್ತು ಸಾಗಣಿದಾರರು, ಮನೆಗಳಿಗೆ ಆಹಾರ, ವಸ್ತು ತಲುಪಿಸುತ್ತಿರುವ ಯುವಕರು, ಸಣ್ಣ ರೈತರು, ಕೃಷಿ ಕಾರ್ಮಿಕರು, ಗೃಹ ಕೃತ್ಯ ನಿರ್ವಹಣೆ ಮಾಡುವವರು, 'ಮೇಲಿನಿಂದ ಕೆಳಗೆ ಆರ್ಥಿಕ ಹರಿವು' (trickle down economy) ನಮ್ಮದಾಗುತ್ತಿರುವುದರಿಂದ ಬಡ, ಅತಿ ಬಡವ ಸಮಾಜ ನಿರ್ಮಾಣವಾಗುತ್ತಿದೆ. ಈ ಅಸಂಘಟಿತ ವಲಯದ ಆಶಾಕಿರಣವೆಂದರೆ 'ಸಹಕಾರ ಚಳುವಳಿ'. ಇಲ್ಲಿನ ಬಹುದೊಡ್ಡ ಕೊರತೆ ನಾಯಕತ್ವ. ಇಂದಿನ ಅವಶ್ಯಕತೆ ಸಹಕಾರ ಚಳುವಳಿ ಜನರ ಚಳುವಳಿಯಾಗುವ ಅವಶ್ಯಕತೆ. ಸರ್ಕಾರ 'ಕೃಪಾ ಪೋಷಿತ' ದಿನಗಳು ದೂರವಾಗಿವೆ. 'ಉಳಿಯಿರಿ ಅಥವ ಅಳಿಯಿರಿ' (either flourish or perish) ಎಂಬಂತಹ ದಿನಮಾನಗಳಲ್ಲಿ ನಾವು ಇದ್ದೇವೆ. ಈ ದಿನಗಳ ಚಟುವಟಿಕೆಗಳ, ಅವಶ್ಯಕತೆಗಳನುಸಾರ, ವಿನೂತನ ಉದ್ದೇಶಗಳುಳ್ಳ, ಸಹಕಾರ ಸಂಘಗಳ ರಚನೆಗೆ ವಿಪುಲ ಅವಕಾಶಗಳಿವೆ. ಉತ್ಪಾದನೆ, ಸೇವಾ, ಮಾರುಕಟ್ಟೆ ವಲಯಗಳಲ್ಲಿ ಸಹಕಾರದ ಮೂಲಕ ಸ್ವಾವಲಂಭನೆ ಸಾಧ್ಯ. ಸರ್ಕಾರದ ಯಾವುದೇ ಉಪಕ್ರಮಗಳು ಜನರ ತೊಡಗಿಸುವಿಕೆ ಇಲ್ಲದೇ ಯಶಸ್ವಿಯಾಗುವುದಲ್ಲ ಎಂಬುವುದು ಅನುಭವ ವೇದ್ಯ.

**"ನಮ್ಮೆಲ್ಲ ಸಮಸ್ಯೆಗಳು ಪರಿಹಾರಗೊಳ್ಳುವ ತನಕ ಚಳುವಳಿಗಳನ್ನು ಜೀವಂತವಾಗಿ ಇಟ್ಟಿರುವುದು ಅತ್ಯಗತ್ಯ"**

**– ಕುವೆಂಪು**